www.mahitiloka.com

www.vijayavani.net twitter.com/VVani4U www.facebook.com/VVani4U www.epapervijayavani.in studentmitra12@gmail.com ಬೆಂಗಳೂರು • ಹುಬ್ಬಳ್ಳಿ • ವಿಜಯಪುರ • ಮೈಸೂರು • ಗಂಗಾವತಿ • ಚಿತ್ರದುರ್ಗ • ಶಿವಮೊಗ್ಗ • ಕಲಬುರಗಿ • ಬೆಳಗಾವಿ

ಮುಂಜಾನೆ ಮಾತು

ಯಾರನ್ನೂ ಮೆಚ್ಚಿಸುವ ಅಗತ್ಯವಿಲ್ಲ ಅನ್ನುವ ಸ್ಥಿತಿಗೆ ಬಂದರೆ ಅದೊಂದು ಸಾರ್ಥಕ ಸಂಗತಿ. ಅಂಥದೊಂದು ನಿಜ ನೆಮ್ಮದಿ ಗಳಿಸಲು ಪ್ರಯತ್ನಿಸೋಣ !

ವಿಜಯವಾಣಿ

ನಂ. 1* ಕನ್ನಡ ದಿನಪತ್ರಿಕೆ

ಹುಬ್ಬಳ್ಳಿ
ಪುಟ: 8
ಸಂಪುಟ: 7
ಸಂಚಿಕೆ: 313
VIJAYAVANI HUBBALLI

ಕನ್ನಡಿಗರ ಧ್ವನಿ

10 ಫೆಬ್ರವರಿ 2019 | ಭಾನುವಾರ

₹1

ಯೂನಿವರ್ಸಲ್/ ಚಾಣಕ್ಯ/ ಸ್ಪರ್ಧಾಸ್ಫೂರ್ತಿ ಕೋಚಿಂಗ್ ಸೆಂಟರ್‌ಗಳಿಂದ ಸ್ಪರ್ಧಾತ್ಮಕ ಪರೀಕ್ಷೆಗಳ ಮಾದರಿ ಪ್ರಶ್ನೋತ್ತರಗಳು 3

ಬ್ಯಾಂಕಿಂಗ್/ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗೆ ಬ್ರೆಟ್ ಸೊಲ್ಯೂಷನ್ಸ್ ಮಾರ್ಗದರ್ಶಿ 4

ವಿದ್ಯಾರ್ಥಿ ಉದ್ಯೋಗ ಮಿತ್ರ

ಪ್ರಥಮ, ದ್ವಿತೀಯ ಪಿಯುಸಿ ಸೈನ್ಸ್ ಪಠ್ಯ 7

ದ್ವಿತೀಯ ಪಿಯುಸಿ ಕಾಮರ್ಸ್ ಪಠ್ಯ ಪುಟ 6ರಲ್ಲಿ...

ದ್ವಿತೀಯ ಪಿಯುಸಿ ಕಾಮರ್ಸ್ ಪಠ್ಯ 6

ವಿಜಯವಾಣಿ Buddy4Study.com ಪ್ರತಿಭಾ ನಿಧಿ ವಿದ್ಯಾರ್ಥಿವೇತನ ಮಾಹಿತಿ

ಎಸ್ಸೆಸ್ಸೆಲ್ಸಿ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ ಪಠ್ಯ 2

ಪುಟ 8 ಪಂಚಾಂಗ

ಕೆಎಎಸ್/ಪಿಎಸ್‌ಐ/ ಎಫ್‌ಡಿಎ ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗೆ ಕಾಪರ್ ಏಜ್‌ನ ಪರಿಣತರ ಮಾರ್ಗದರ್ಶನ 3

BULABULES CAREER ACADEMY AND SCHOOL OF BANKING, DHARWAD
PGCET-MBA
IBPS BANK PO CLERK
TRAINING TILL YOU GET THE JOB
7795007556

KAS
MOCK INTERVIEW
In Dharwad & Bengaluru Centres on 10-2-2019
10 days Programme on KAS Interview Preparation
Classic KAS & IAS Study Circle
ಯುಸಿಟ್-ಎ, ಸಪ್ತಾಪುರ ಬಾವಿ ಸರ್ಕಲ್, ಧಾರವಾಡ
M: 9980552080

ಅಮೋಘವರ್ಷ ಕೋಚಿಂಗ್ ಸೆಂಟರ್
ವಿಜಯನಗರ, ಬೆಂಗಳೂರು-40
KAS (GP) MOCK INTERVIEW
Starts on 10-02-2019
upto complete preparations conducted by:
IAS/KAS Officers and Ex-Members of KPSC
NO FEES IS CHARGED
For free Registration contact:
Ramannagowda.G.P
M.Sc., M.Ed., K-SET, UGC-NET, (Ph.D)
9916766911, 8088776736

* Source: Average Combined Circulation for All Edition. ABC July-Dec 2015.

ದಕ್ಷಿಣ ಕನ್ನಡ ನ್ಯಾಯಾಲಯಗಳಲ್ಲಿ ಆದೇಶ ಜಾರಿಕಾರ ಹುದ್ದೆಗಳು 5

24 ನಕಲಿ ವಿವಿಗಳಲ್ಲಿ ಎರಡರ ವಿರುದ್ಧ ಮಾತ್ರ ಎಫ್‌ಐಆರ್

ದೇಶಾದ್ಯಂತ 24 ನಕಲಿ ವಿವಿಗಳನ್ನು ಗುರುತಿಸಿರುವ ಯುಜಿಸಿ, ಕೇವಲ 2 ನಕಲಿ ವಿವಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿದೆ. ಉಳಿದ ನಕಲಿ ವಿವಿಗಳಿಗೆ ಶೋಕಾಸ್ ನೋಟಿಸ್ ಹಾಗೂ ಎಚ್ಚರಿಕೆ ಪತ್ರ ನೀಡಿ ಕೈ ತೊಳೆದುಕೊಳ್ಳುತ್ತಿದೆ.

ಮಾನವ ಸಂಪನ್ಮೂಲ ಇಲಾಖೆ ರಾಜ್ಯ ಸಚಿವ ಸತ್ಯಪಾಲ್ ಸಿಂಗ್ ಮಂಗಳವಾರ ಸಂಸತ್ತಿಗೆ ನೀಡಿರುವ ಉತ್ತರದಲ್ಲಿ ಈ ಅಂಶ ಬಹಿರಂಗವಾಗಿದೆ. ನಕಲಿ ವಿವಿಗಳು ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ನೀಡುವ ಜಾಹೀರಾತುಗಳನ್ನು ನೀಡಿ ವಿದ್ಯಾರ್ಥಿಗಳನ್ನು ಸೆಳೆಯುತ್ತಿವೆ. 24 ನಕಲಿ ವಿವಿಗಳ ಹೆಸರುಗಳನ್ನು ಯುಜಿಸಿ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದು, ದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪ್ಲಾನಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ ಹಾಗೂ ಪಶ್ಚಿಮ ಬಂಗಾಳದ ಬಯೋ-ಕೆಮಿಕ್ ಎಜುಕೇಷನ್ ಗ್ರಾಂಟ್ಸ್ ಕಮಿಷನ್ ವಿರುದ್ಧ ಎಫ್‌ಐಆರ್ ದಾಖಲಿಸಿದೆ ಎಂದು ಹೇಳಿದ್ದಾರೆ.

ಯುಜಿಸಿ ಕಾಯ್ದೆಯಲ್ಲಿ ಹೇಳುವಂತೆ ಯುಜಿಸಿ, ನಕಲಿ ವಿವಿಗಳ ವಿರುದ್ಧ ಕೇವಲ 1 ಸಾವಿರ ರೂ. ಮಾತ್ರ ದಂಡ ವಿಧಿಸಬಹುದು. ಆದರೆ ಕಠಿಣ ಕ್ರಮ ಕೈಗೊಳ್ಳುವ ಅಧಿಕಾರವಿಲ್ಲ. ಹೆಚ್ಚಿನ ಅಧಿಕಾರ ನೀಡುವಂತೆ ಯುಜಿಸಿ ಕಾಯ್ದೆಗೆ ತಿದ್ದುಪಡಿ ತರುವಂತೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯಕ್ಕೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನ ಶೂನ್ಯವಾಗಿದೆ. ಆದ್ದರಿಂದ ನಕಲಿ ವಿವಿಗಳು ಭೀತಿಯಿಲ್ಲದೆ ರಾಜಾರೋಷವಾಗಿ ಕಾರ್ಯನಿರ್ವಹಿಸುತ್ತಿವೆ. ಇದರಿಂದ ಸಾವಿರಾರು ವಿದ್ಯಾರ್ಥಿಗಳು ಮೋಸಹೋಗುತ್ತಿದ್ದಾರೆ.

ಬಿಎಡ್ ಇನ್ಮುಂದೆ 4 ವರ್ಷದ ಕೋರ್ಸ್!

ಬೋಧನಾ ಗುಣಮಟ್ಟವನ್ನು ಸುಧಾರಿಸುವ ಸಲುವಾಗಿ ಮುಂದಿನ ವರ್ಷದಿಂದ ಬ್ಯಾಚುಲರ್ ಇನ್ ಎಜುಕೇಷನ್ (ಬಿ.ಎಡ್) ಪದವಿಯನ್ನು ನಾಲ್ಕು ವರ್ಷ ಮಾಡಲಾಗುವುದು ಎಂದು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಪ್ರಕಾಶ್ ಜಾವಡೇಕರ್ ಗುರುವಾರ ಹೇಳಿದ್ದಾರೆ.

ನವದೆಹಲಿಯಲ್ಲಿ ನಡೆಯುತ್ತಿರುವ ಕೇಂದ್ರೀಯ ವಿದ್ಯಾಲಯ ಮತ್ತು ಜವಾಹರ್ ನವೋದಯ ವಿದ್ಯಾಲಯ ಪ್ರಾಂಶುಪಾಲರ 2ನೇ ದಿನದ ಸಮ್ಮೇಳನದಲ್ಲಿ ಮಾತನಾಡಿದ ಅವರು, ಬೋಧನೆಯ ಮಾನದಂಡ ಕೆಳಮಟ್ಟಕ್ಕೆ ಹೋಗುತ್ತಿರುವುದರಿಂದ ಮುಂದಿನ ವರ್ಷದಿಂದ ಬಿಎಡ್ ಅನ್ನು ನಾಲ್ಕು ವರ್ಷಗಳ ಸಂಯೋಜಿತ ಕೋರ್ಸ್ ಪ್ರಾರಂಭಿಸುತ್ತಿದ್ದೇವೆ. ವೃತ್ತಿ ಆಯ್ಕೆ ಮಾಡಿಕೊಳ್ಳುವವರು ಇದನ್ನು ಕೊನೆಯ ಆಯ್ಕೆ ಆಗಿ ಪರಿಗಣಿಸುತ್ತಿದ್ದಾರೆ. ಬಿ.ಎಡ್‌ಗೂ ಆಧ್ಯತೆ ದೊರೆಯಬೇಕಿದೆ ಎಂದರು.

ಬಿ.ಎಡ್ ಪಠ್ಯಕ್ರಮವನ್ನು ನ್ಯಾಷನಲ್ ಕೌನ್ಸಿಲ್ ಫಾರ್ ಟೀಚರ್ ಎಜುಕೇಷನ್ ಮರು ರಚಿಸಿದೆ. ಶಿಕ್ಷಕರ ಶಿಕ್ಷಣದ ಬಗ್ಗೆ ಶಾಸನಬದ್ಧ ಸಂಸ್ಥೆ ಜವಾಬ್ದಾರಿ ವಹಿಸಿಕೊಳ್ಳಲಿದೆ. ಈ ಮೊದಲು ಪದವಿ ನಂತರ ಎರಡು ವರ್ಷದ ಬಿ.ಎಡ್ ಪದವಿಗೆ ಸೇರಬೇಕಿತ್ತು. ಈಗ ಹೊಸ ನಿಯಮದ ಪ್ರಕಾರ 12ನೇ ತರಗತಿ ನಂತರ ಬಿ.ಎಡ್‌ಗೆ ಸೇರಬಹುದು. ಇದರಿಂದ ಅಭ್ಯರ್ಥಿಗಳ ಒಂದು ವರ್ಷ ಉಳಿತಾಯವಾಗುತ್ತದೆ ಎಂದು ಹೇಳಿದರು.

ಅಣಕು ಪರೀಕ್ಷೆಗೆ ಎನ್‌ಟಿಎ ಮೊಬೈಲ್ ಆ್ಯಪ್

ವಿದ್ಯಾರ್ಥಿಗಳು ತಮ್ಮ ಸ್ಮಾರ್ಟ್‌ಫೋನ್ ಮೂಲಕ ಅಣಕು ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅನುಕೂಲವಾಗುವಂತೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ಮೊಬೈಲ್ ಆ್ಯಪ್ ಬಿಡುಗಡೆ ಮಾಡಿದೆ. ಈ ಬಗ್ಗೆ ಮಾನವ ಸಂಪನ್ಮೂಲ ಖಾತೆ ರಾಜ್ಯ ಸಚಿವ ಸತ್ಯಪಾಲ್ ಸಿಂಗ್ ಲೋಕಸಭೆಯಲ್ಲಿ ಮಾಹಿತಿ ನೀಡಿದ್ದಾರೆ. ಇದರ ಜತೆಗೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ನೆರವಾಗುವ ಉದ್ದೇಶದಿಂದ ದೇಶಾದ್ಯಂತ 4,000 ಟೆಸ್ಟ್ ಪ್ರಾಕ್ಟೀಸ್ ಸೆಂಟರ್(ಟಿಪಿಸಿ) ಆರಂಭಿಸಲು ನಿರ್ಧರಿಸಲಾಗಿದ್ದು, ಇದು ಕಂಪ್ಯೂಟರ್ ಆಧರಿತ ಪರೀಕ್ಷೆಗಳಾಗಿರುತ್ತವೆ. ಟಿಪಿಸಿಗಳಿಗೆ ತೆರಳುವುದಕ್ಕೆ ವಿದ್ಯಾರ್ಥಿಗಳು ಎನ್‌ಟಿಎ ವೆಬ್‌ಸೈಟ್ ಮೂಲಕ ನೋಂದಣಿ ಮಾಡಿಕೊಳ್ಳಬೇಕಾಗಿರುತ್ತದೆ. ಈ ಎಲ್ಲ ಸೇವೆಗಳು ಉಚಿತವಾಗಿರುತ್ತವೆ.

ಎನ್‌ಟಿಎ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಪರೀಕ್ಷೆ ನಡೆಸುವ ಸಂಸ್ಥೆಯಾಗಿದೆ.

ಇಎಸ್‌ಐಸಿ ನರ್ಸಿಂಗ್ ಕಾಲೇಜು, ಕರ್ನಾಟಕ
ಹುದ್ದೆ: ವೈಸ್ ಪ್ರಿನ್ಸಿಪಾಲ್ ಕಂ. ಪ್ರೊಫೆಸರ್
ವಿದ್ಯಾರ್ಹತೆ: ಸ್ನಾತಕೋತ್ತರ ಪದವಿ
ವಯೋಮಿತಿ: ಗರಿಷ್ಠ 55 ವರ್ಷ
ಅನುಭವ: ಕನಿಷ್ಠ 12 ವರ್ಷ
ಸಂದರ್ಶನ: ಫೆಬ್ರವರಿ 19
ಸ್ಥಳ: ಕಲಬುರಗಿ
ಹೆಚ್ಚಿನ ಮಾಹಿತಿಗೆ:
https://bit.ly/2SCqD1j

ಡೆಲ್ಲಿ ಟೆಕ್ನೊಲಾಜಿಕಲ್ ಯೂನಿವರ್ಸಿಟಿ, ದೆಹಲಿ
ಹುದ್ದೆ: ರಿಜಿಸ್ಟ್ರಾರ್
ವಿದ್ಯಾರ್ಹತೆ:
ಸ್ನಾತಕೋತ್ತರ ಪದವಿ/ಪಿಎಚ್‌ಡಿ
ವಯೋಮಿತಿ: ಗರಿಷ್ಠ 5ವರ್ಷ
ಅನುಭವ: ಕನಿಷ್ಠ 15 ವರ್ಷ
ಅರ್ಜಿ ಸಲ್ಲಿಸಲು ಕಡೆ ದಿನ:
ಫೆಬ್ರವರಿ 18
ಹೆಚ್ಚಿನ ಮಾಹಿತಿಗೆ:
www.dtu.ac.in

ಅಮೆರಿಕದ ರಾಜಕಾರಣಿ ಡೇವಿಡ್ ಡಿಂಗೆಲ್



ವ್ಯಕ್ತಿ ವಿಶೇಷ 8

ಸಂಡೇ ಗೆಸ್ಟ್

ಆತ್ಮವಿಶ್ವಾಸ, ಪ್ರಾಮಾಣಿಕ ಪ್ರಯತ್ನ ಇದ್ದರೆ ಸಾಧನೆ ಸುಲಭ

| ಸುಣಗಾರ ರಾಘವೇಂದ್ರ

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಪ್ರೊಬೇಷನರಿ), ಹೊಸಪೇಟೆ, ಬಳ್ಳಾರಿ ಜಿಲ್ಲೆ 5

ಕುಂಭಮೇಳದಲ್ಲಿ ಪ್ರಾಥಮಿಕ ಶಾಲೆ!

ಉತ್ತರಪ್ರದೇಶದಲ್ಲಿ ನಡೆಯುತ್ತಿರುವ ಕುಂಭ ಮೇಳಕ್ಕೆ ಬೇರೆ ಬೇರೆ ನಗರಗಳಿಂದ ಬಂದಿರುವ ಕಾರ್ಮಿಕರು ಮತ್ತು ಸ್ವಚ್ಛತಾ ಸಿಬ್ಬಂದಿಯ ಮಕ್ಕಳಿಗಾಗಿ ತಾತ್ಕಾಲಿಕ ಪ್ರಾಥಮಿಕ ವಿದ್ಯಾಲಯದ ವ್ಯವಸ್ಥೆ ಮಾಡಿದೆ. ಇಲ್ಲಿ ಶಿಕ್ಷಕರು ಮತ್ತು ಮಧ್ಯಾಹ್ನದ ಬಿಸಿಯೂಟ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ. ಜತೆಗೆ ಲರ್ನಿಂಗ್ ಕಾರ್ನರ್, ಅಂಗನವಾಡಿ ಕೇಂದ್ರ ಆರಂಭಿಸಲಾಗಿದೆ.

ಕಳೆದ ಡಿಸೆಂಬರ್ 15ರಿಂದಲೇ ಶಾಲೆಗಳು ಆರಂಭವಾಗಿದ್ದು, ಐದು ಬೇರೆ ಬೇರೆ ಸೆಕ್ಟರ್‌ಗಳಲ್ಲಿ ಶಾಲೆಗಳನ್ನು ಆರಂಭಿಸಲಾಗಿದೆ. ಇಲ್ಲಿ ಮಕ್ಕಳಿಗೆ ಶಾಲೆಗೆ ಬರಲು ಆಸಕ್ತಿ ಹುಟ್ಟಿಸುವ ಸಲುವಾಗಿ ಬ್ಯಾಗ್, ಬಟ್ಟೆ, ಸಾಕ್ಸ್, ಚಪ್ಪಲಿ ಮತ್ತು ಪುಸ್ತಕ ಉಚಿತವಾಗಿ ಕೊಡುವ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ಶಾಲೆಯನ್ನು ವಿವಿಧ ರೀತಿಯಲ್ಲಿ ಅಲಂಕರಿಸಿ ಮಕ್ಕಳನ್ನು ಆಕರ್ಷಿಸುವ ಪ್ರಯತ್ನವನ್ನೂ ಮಾಡಲಾಗುತ್ತಿದೆ.

ಪ್ರತಿ ಶಾಲೆಯಲ್ಲಿ 90ರಿಂದ 100 ವಿದ್ಯಾರ್ಥಿಗಳಿದ್ದು, ಆಧಾರ್ ಕಾರ್ಡ್ ಮೂಲಕ ಮಕ್ಕಳ ದಾಖಲಾತಿ ಮಾಡಿಕೊಳ್ಳಲಾಗಿದೆ. ಪ್ರತಿ ಶಾಲೆಯಲ್ಲಿ 6ರಿಂದ 7 ಶಿಕ್ಷಕರನ್ನು ನಿಯೋಜಿಸಲಾಗಿದೆ.

ಚಾಣಕ್ಯ ಕರಿಯರ್ ಅಕಾಡೆಮಿ, ವಿಜಯಪುರ
(IAS & KAS ತರಬೇತಿ ಕೇಂದ್ರ)
POLICE 1ನೇ ಬ್ಯಾಚ್
ಪ್ರವೇಶ ಪ್ರಾರಂಭ: ದಿ. 10.02.2019
ತರಗತಿ ಪ್ರಾರಂಭ: ದಿ. 15.02.2019
KAS/PSI 3ನೇ ಬ್ಯಾಚ್
ಪ್ರವೇಶ ಪ್ರಾರಂಭ: ದಿ. 15.02.2019
ತರಗತಿ ಪ್ರಾರಂಭ: ದಿ. 20.02.2019
CET 6ರಿಂದ 8ನೇ ತರಗತಿ ಶಿಕ್ಷಕರ ನೇಮಕಾತಿ ಬ್ಯಾಚ್ ಶೀಘ್ರದಲ್ಲಿ ಫೋನ್ ಮೂಲಕ ನೊಂದಾಯಿಸಿಕೊಳ್ಳಬೇಕು.
ಮಲಘಾಣ ಬಿಲ್ಡಿಂಗ್, ಮೀನಾಕ್ಷಿ ಚೌಕ್ ವಿಜಯಪುರ
08352-222197, 240197
Cell : 9448179762

ಸಂಗೀತ ಮಾಂತ್ರಿಕ ಅರ್ಜುನ್ ಜನ್ಯ ಹಾಗೂ ಕರ್ನಾಟಕ ರಾಜ್ಯ ಕ್ಷತ್ರಿಯರ ಶೈಕ್ಷಣಿಕ ಮತ್ತು ಕೌಶಲ್ಯಾಭಿವೃದ್ಧಿ ಚಾರಿಟೆಬಲ್ ಟ್ರಸ್ಟ್ (ರಿ) ರವರ ಸಾರಥ್ಯದಲ್ಲಿ

KAS/PSI PDO/PC
BANNIROY COACHING CENTER
ಸೌಲಭ್ಯಗಳು
ಉಚಿತ ತರಬೇತಿ
3 ತಿಂಗಳ ಅವಧಿ
• ಸುಸಜ್ಜಿತ ತರಬೇತಿ ಕೊಠಡಿಗಳು • ಉತ್ತಮ ಬೋಧಕರಿಂದ ತರಬೇತಿ
• 24x7 ಗ್ರಂಥಾಲಯ ಸೌಲಭ್ಯ, • ವಾರಂತ್ಯದಲ್ಲಿ ಮಾದರಿ ಪರೀಕ್ಷೆ
• ಕೆಎಎಸ್ ಮುಖ್ಯ ಪರೀಕ್ಷೆಯ ಐಚ್ಛಿಕ ವಿಷಯಗಳ ತರಗತಿಗಳು ಲಭ್ಯ (R.D. Anthropology)
ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ವಸತಿ ಮತ್ತು ಊಟದ ಸೌಲಭ್ಯವಿದ್ದು ಕನಿಷ್ಠ ಶುಲ್ಕವಿರುತ್ತದೆ.
ನೂತನ ಬ್ಯಾಚ್ 20-02-2019 ಪ್ರಾರಂಭ ಷರತ್ತುಗಳು ಅಪ್ಲಯೆ
7337733715, 7338512227
ನಂ. 166 ಸಮೃದ್ಧಿ, 8ನೇ ಮುಖ್ಯರಸ್ತೆ, 13ನೇ ಅಡ್ಡರಸ್ತೆ, ಎ.ಜಿ.ಬಿ. ಲೇಔಟ್, ಸಪ್ತಗಿರಿ ಆಸ್ಪತ್ರೆ ಎದುರು, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು-560090

Scanned by CamScanner

ಸಿಬಿಎಸ್‌ಇ 10ನೇ ತರಗತಿ ಪಾಠಗಳು

AKSHARA INTERNATIONAL PUBLIC SCHOOL
Kowdle, Maddur Tq. Mandya Dist. Ph.: 9964807951 email:aksharalpskowdle@gmail.com

CHAPTER 7: LIFELINE OF NATIONAL ECONOMY

called international trade.

Remember These Facts

Golden Quadrilateral road connect north with south and east with west. It connects Delhi, Mumbai, Chennai and Kolkata. It is 6 lanes good quality super express highway. It total length is 5846 km.

East – West Corridor connects Silchar [Assam] with Porbandar [Gujurat]. It connects Guwahati, Gorakhpur, Kanpur, Jhansi and Rajkot.

North – South Corridor connects Srinagar [J & K] with Kanyakumari. It connects Delhi, Agra, Nagpur, Hydrabad and Bangalore.

Density of road is lowest in Jammu and Kashmir. It is only 10 km for 100 sq. km. area. Density of road is low in this state because this is a hilly state with very low populaton.

Highest road density is found in Kerala. It is about 375 km. for 100 sq. km. area.

Longest pipeline in India is H-B-J Pipeline [Hazira-Bijapur-Jagddishpur]. It is about 1700 km. long.

Indian railway is divided into 16 railway zones.

NH – 1 connects Delhi and Amritsar.

NH – 2 connects Delhi and Kolkata. It is also called as Grand Truck Road.

NH – 3 connects Mumbai and Agra.

NH – 7 connects Varanasi and Kanyakumari. It is longest in India.

Road Transport and Its Types

India has one of the largest road networks in the world. Total road length in India is about 2.3 million km. There are various types of road in India.

Golden Quadrilateral: It is a 6 lane super highway. This connects four mega cities of our country i.e Delhi, Mumbai, Chennai and Kolkata. East-West Corridor connects Silchar [Assam] with Porbandar [Gujarat]. North-South Corridor connects Srinagar [J & K] with Kanyakumari [Tamil Nadu].

National Highways: These roads are most important in India. National Highways are constructed by CPWD. Important National Highways are NH-1, NH-2, NH-7 etc. These highways connects important cities, railways stations, port, mining areas, capital towns etc.

State Highways: These roads connect state capital with district headquarters. They are constructed by SPWD [State Public Work Dept.].

District Roads: These roads are found in rural areas. They connect district headquarter with village and blocks.

Other Roads: It includes village roads. They are mainly non-metalled roads. Many roads have been constructed under "Pradhan Mantri Grameen Sadak Yojana".

Border Roads: Border Roads are constructed by Border Road Organisation [BRO]. These roads are constructed along the borders which are used to connect isolated parts with main country. These roads are very important from strategic point of view.

Merits or Advantage of Roadways

a) Construction and maintenance of road is much lower than railways.

b) Roads can be constructed on hills, plateaus, forests and desert also.

c) Road can negotiate high degree of slope and can take sharp turns.

d) It provides door-to-door service facilities.

e) Roads can be constructed in the hills and forest also.

f) It is economical for few passengers and small amount of goods.

g) Transportation of perishable items e.g. milk, fish, vegetables are more reliable by roads.

h) Cost of loading and unloading of goods is much lower.

i) Road transport provide IInk between other mode of transport such as rail, airport, seaport etc.

Indian Railway at a Glance

§ Indian railway is about 150 years old. First rail was started in 1853 between Mumbai and Thane.

§ It connects State Capital with Capital of India. It also connects major towns and cities, tourist places, mining centers, seaports, airports etc.

§ There are about more than 7,000 stations on 63,000 km. long railway tract.

§ Indian railway is divided into 16 zones for proper administration.

§ Railways in India have three gauge system:

a) Broad Gauge [1.676 m]
b) Meter Gauge [1.0 m]
c) Narrow Gauge [0.762 and 0.610 m].

§ There are various types of train running in

contd/-

SSLC LESSONS JOSHI TUTORIALS

Joshi Compound, 4th Cross, Malmaddi, Dharwad. Ph: (0836) 2744040
Cell: 9620687552, 9448862198

CHAPTER-11 THE HUMAN EYE AND THE COLORFUL WORLD

KEY CONCEPTS
THE HUMAN EYE . . . . . .

The ray of light PQ is incident at E, refracts along EF and again at F along FS. The angle between the incident ray PE and the emergent ray FS is called the angle of deviation (D).

Dispersion of while light by glass prism : The phenomenon of splitting of white light into its seven constituent colours when it passes through a glass prism is called dispersion of white light. The various colours seen are violet, indigo, blue, yellow, orange and red.

The sequence of colours remember as VIBGYOR.



The band of seven colours is called spectrum.

Activity

●Take a thick sheet of cardboard and make a small hole or narrow slit in its middle. ● Allow sunlight to fall on the narrow slit. This gives a narrow beam of white light. ● Now, take a glass prism and allow the light from the slit to fall on one of its faces. ●Turn the prism slowly until the light that comes out its appears on a nearby screen. ●What do you observe ? you will find a beautiful band of colour. Why does this happen?

Scattering of light

The interplay of light with objects around us gives rise to several spectacular phenomena in nature. The blue colour of the sky, colour of water in deep sea, the reddening of the sun at sunrise and the sunset are some of the wonderful phenomena we are familiar with. In the previous class, you have learnt about the scattering of light by colloidal particles. The path of a beam of light passing through a true solution is not visible. However, its path becomes visible through a colloidal solution where the size of the particles is relatively larger.

Composition of white light

White light consists of seven colours i.e., violet, indigo, blue, green, yellow, orange and red. These colours have different wavelengths as shown in table

Sl.no	Colour	Wavelength Å
1.	Violet	4000 Å
2.	Indigo	4500 Å
3.	Blue	4800 Å
4.	Green	5400 Å
5.	Yellow	5800 Å
6.	Orange	6000 Å
7.	Red	7900 Å

$1 Å = 10^{-10} m$ Å means Angstrom.

V I B G Y O R i.e.,

Increasing order of wavelength

Monochromatic light: Light considering of single colour or wavelength is called monochromatic light ,e.g., sodium light.

contd/-

ಎಸ್.ಎಸ್.ಎಲ್.ಸಿ. ಕನ್ನಡ ಮಾಧ್ಯಮ ಎನ್‌ಸಿಇಆರ್‌ಟಿ ಪಠ್ಯ

ಸಮಾಜ ವಿಜ್ಞಾನ * ಸಮಾಜಶಾಸ್ತ್ರ * ಅಧ್ಯಾಯ 8

ಗಾಂಧಿಯುಗ ಮತ್ತು ರಾಷ್ಟ್ರೀಯ ಹೋರಾಟ

2. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

10. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಸಾಧನೆಗಳನ್ನು ವಿವರಿಸಿ.

ಉ:- ■ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರಿಂದ ನೇತಾಜಿ ಎಂದು ಜನಪ್ರಿಯರಾದರು. ■ಸ್ವಾತಂತ್ರ್ಯ ಹೋರಾಟಕ್ಕಾಗಿ ವಿವಿಧ ದೇಶಗಳ ನಗರಗಳಾದ ವಿಯನ್ನಾ, ಬರ್ಲಿನ್, ರೋಮ್, ಇಸ್ತಾಂಬುಲ್ ಪ್ರಯಾಣ ಬೆಳೆಸಿ ಸ್ವಾತಂತ್ರ್ಯಕ್ಕಾಗಿ ಬೆಂಬಲ ನೀಡಲು ಪ್ರೇರೇಪಿಸಿದರು. ■ಜವಾಹರ್ ಲಾಲ್ ಮತ್ತು ಸುಭಾಷ್ ಚಂದ್ರರು ಸೇರಿ ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದರು. ■ಗಾಂಧೀಜಿಯವರ ಕಾರ್ಯವಿಧಾನದಿಂದ ಹೊರಬಂದು ಫಾರ್ವರ್ಡ್ ಬ್ಲಾಕ್ ಎಂಬ ಹೊಸ ಪಕ್ಷವನ್ನು ಕಟ್ಟಿದರು. ■ಭಾರತವು ಜಾಗತಿಕ ಯುದ್ಧದಲ್ಲಿ ಭಾಗವಹಿಸುವಿಕೆಯನ್ನು ವಿರೋಧಿಸಿದ್ದರಿಂದ ಗೃಹಬಂಧನಕ್ಕೆ ಒಳಗಾದರು. ■ಗೃಹಬಂಧದಿಂದ ತಪ್ಪಿಸಿಕೊಂಡು ಜರ್ಮನಿಗೆ ತೆರಳಿ ಸರ್ವಾಧಿಕಾರಿಯಾದ ಹಿಟ್ಲರ್‌ನ ಸಹಾಯವನ್ನು ಕೇಳಿದರು. ■ಅಜಾದ್ ಹಿಂದ್ ರೇಡಿಯೋ ಮೂಲಕ ತಮ್ಮ ಭಾಷಣಗಳನ್ನು ಭಾರತೀಯರಿಗೆ ಪ್ರಸರಣ ಮಾಡಿದರು. ■ಭಾರತೀಯರನ್ನು ಸಂಘಟಿಸಿದ್ದ ರಾಸ್‌ಬಿಹಾರಿ ಬೋಸ್ ಮತ್ತು ಬೋಸ್‌ರು ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್‌ನ ಸೇನಾ ವಿಭಾಗವನ್ನು INA ಎಂದು ಕರೆಯುತ್ತದ್ದರು. ■ INA ನೇತೃತ್ವವನ್ನು ವಹಿಸಿಕೊಂಡು ದೆಹಲಿ ಬಲೋಗೆ ಕರೆನೀಡಿದರು. ■ನನಗೆ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ ಎಂದು ಕರೆಯನ್ನಿತ್ತರು. ■ಸುಭಾಷರು ರಂಗೂನಿನ ಮೂಲಕ ಬ್ರಿಟಿಷರ ಕೈಯಲ್ಲಿದ್ದ ದೆಹಲಿಯನ್ನು ವಶಪಡಿಸಿಕೊಳ್ಳಲು ಯುದ್ಧ ತಂತ್ರವನ್ನು ರೂಪಿಸಿದರು. ಆದರೆ ಸುಭಾಷ್‌ರು ಆಕಸ್ಮಿಕವಾಗಿ ವಿಮಾನ ಅಪಘಾತದಲ್ಲಿ ಮಡಿದರು.

11. ಸಾಮಾಜಿಕ ಸಮಾನತೆಯಿಲ್ಲದೇ ರಾಜಕೀಯ ಸ್ವಾತಂತ್ರ್ಯವು ಅರ್ಥಹೀನ ಎಂದು ಅಂಬೇಡ್ಕರ್‌ರವರ ಹೇಳಿಕೆಯನ್ನು ವಿಶ್ಲೇಷಿಸಿ.

ಉ:- ■ ಭಾರತದ ಶ್ರೇಣಿಕೃತ ವ್ಯವಸ್ಥೆಯಲ್ಲಿರುವ ಕಟ್ಟಕಡೆಯ ಮನುಷ್ಯನಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ದೊರೆಯದಿದ್ದರೆ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ. ■ಇವರು ಜಾತಿ ವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿ ಅದರ ವಿನಾಶಕ್ಕೆ ಹೋರಾಟಗಳನ್ನು ನಡೆಸಿದರು. ■ಅಸ್ಪೃಶ್ಯರು ಕನಿಷ್ಠ ಮಟ್ಟದ ಅವಕಾಶಗಳಿಂದಲೂ ವಂಚಿತರಾಗಿರುವುದನ್ನು ನಿರೂಪಿಸಲು ಮಹಮದ್ ಕರೆ ಮತ್ತು ಕಾಲಾರಾಂ ದೇವಾಲಯ ಚಳವಳಿಗಳನ್ನು ರೂಪಿಸಿದರು. ■ಇವರು ಮೂರು ದುಂಡು ಮೇಜಿನ ಪರಿಷತ್ತಿನ ಸಮಾವೇಶಗಳಲ್ಲಿ ಭಾಗವಹಿಸಿ ವಿವಿಧ ಬಗೆಯ ಸಂಕೋಲೆಗಳಿಂದ ಬಿಡುಗಡೆ ಪಡೆಯಲು ಬೇಕಾದ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿದರು. ■ಅಸ್ಪೃಶ್ಯರ ರಕ್ಷಣೆಗಾಗಿ ಪ್ರತ್ಯೇಕ ಮತಕ್ಷೇತ್ರಗಳನ್ನು ಬಯಸಿದ್ದು ಗಾಂಧಿ ಮತ್ತು ಅಂಬೇಡ್ಕರ್ ನಡುವಿನ ವಿವಾದಕ್ಕೂ ಕಾರಣವಾಯಿತು. ■ಅಂಬೇಡ್ಕರ್ ರವರು ಕಾಂಗ್ರೆಸ್ ಪಕ್ಷವನ್ನು ಸೇರದೆ ಬಹಿಷ್ಕೃತ ಹಿತಕಾರಣಿ ಸಭಾ ಸಂಘಟನೆ, ಹಾಗೂ ಸ್ವತಂತ್ರ ಕಾರ್ಮಿಕ ಪಕ್ಷವನ್ನು ಸ್ಥಾಪಿಸಿದರು. ■ಪ್ರಬುದ್ಧ ಭಾರತ, ಜನತಾ, ಮೂಕನಾಯಕ, ಬಹಿಷ್ಕೃತ ಭಾರತ ಪತ್ರಿಕೆಗಳನ್ನು ಹೊರಡಿಸಿದರು. ■ಜಾತಿ ವ್ಯವಸ್ಥೆಯಿಂದ ಬೇಸತ್ತ ಇವರು ಹಿಂದು ಧರ್ಮವನ್ನು ತೊರೆದು ಭಾರತೀಯ ಸಂಸ್ಕೃತಿಯ ಭಾಗವಾಗಿದ್ದ ಜಾತಿ ಮತ್ತು ಸಾಮಾಜಿಕ ಶ್ರೇಣೀಕರಣವನ್ನು ವಿರೋಧಿಸಿದ ಬೌದ್ಧಧರ್ಮವನ್ನು ಸ್ವೀಕರಿಸಿದರು. ■ಇವರ ಜೀವಮಾನದ ಸಾಧನೆಗಾಗಿ ಭಾರತ ಸರ್ಕಾರವು ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

12. ನೆಹರುರವರು ಪ್ರಧಾನಮಂತ್ರಿಯಾದ ನಂತರ ರಾಷ್ಟ್ರಕ್ಕೆ ನೀಡಿದ ಪ್ರಮುಖ ಕೊಡುಗೆಗಳನ್ನು ವಿವರಿಸಿ.

ಉ:- ■ ಕೈಗಾರಿಕೀಕರಣ ಮತ್ತು ನವಭಾರತದ ಶಿಲ್ಪಿಯಾಗಿ ಭಾರತದ ಮೊದಲ ಪ್ರಧಾನಮಂತ್ರಿಯಾಗಿದ್ದ ನೆಹರುರವರನ್ನು ಕಾಣುತ್ತೇವೆ. ■ಉಕ್ಕಿನ ಮನುಷ್ಯ ಎಂದು ಖ್ಯಾತಿಯಾಗಿದ್ದ ಸರ್ದಾರ್ ವಲ್ಲಭ್‌ಭಾಯ್ ಪಟೇಲ್ ರ ನೇತೃತ್ವದಲ್ಲಿ ಭಾರತದ ಅನೇಕ ದೇಶೀ ಸಂಸ್ಥಾನಗಳ ವಿಲೀನಿಕರಣಕ್ಕೆ ವಿವಿಧತೆಯನ್ನು ಒಪ್ಪುವ ತಾತ್ವಿಕ ತಳಹದಿಯನ್ನು ಹಾಕಿದರು. ■ಬಂಡವಾಳ ಮತ್ತು ಸಮಾಜವಾದಿ ಮಿಶ್ರ ಆರ್ಥಿಕ ನೀತಿಯು ಆಧುನಿಕ ಭಾರತದ ಅಭಿವೃದ್ಧಿಯ ಮೈಲಿಗಲ್ಲಾಯಿತು. ■ಸ್ವಾತಂತ್ರ್ಯ ನಂತರ ಪಂಚವಾರ್ಷಿಕ ಯೋಜನೆಗಳ ಮೂಲಕ ದೇಶದ ಅಭಿವೃದ್ಧಿಯ ಕನಸು ಕಂಡರು. ■ಭಾರತವು ಅಣುಶಕ್ತಿಯನ್ನು ಹೊಂದಬೇಕೆನ್ನುವ ಆಶಯದಿಂದ H.G ಬಾಬಾರವರ ನೇತೃತ್ವದಲ್ಲಿ ಭದ್ರ ತಳಹದಿಯನ್ನು ರೂಪಿಸಿದರು. ■ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಭಾರತವು ಅಲಿಪ್ತ ನೀತಿಯನ್ನು ಪ್ರತಿಪಾದಿಸಿತು. ■ಪಂಚಶೀಲ ತತ್ವಗಳ ಆಧಾರದ ಮೇಲೆ ಶಕ್ತಿ ರಾಜಕಾರಣದಿಂದ ದೂರವೇ ಉಳಿದು ಶಾಂತಿ ಸಹಬಾಳ್ವೆಯ ಸೂತ್ರಗಳನ್ನು ಅನುಷ್ಠಾನಕ್ಕೆ ತರಲು ಕಾರಣರಾದರು.

ಶ್ರೀ ಸಿದ್ಧಗಂಗಾ ಕಾಂಪೋಸಿಟ್ ಹೈಸ್ಕೂಲ್ ಶ್ರೀ ಸಿದ್ಧಲಿಂಗೇಶ್ವರ ನಗರ, ದಾವಣಗೆರೆ.
ಪಿನ್: 577002. ದೂರವಾಣಿ: 08192-232816. ಮೊಬೈಲ್: 9844848987.

Scanned by CamScanner

ಯೂನಿವರ್ಸಲ್‌ನಿಂದ ಐಎಎಸ್ / ಕೆಎಎಸ್ ಕೋಚಿಂಗ್

Political Science

71. Which is/are true regarding features of PESA Act, 1996?
1) Gram Sabha shall identify beneficiaries under poverty alleviation programs. 2) The recommendations of the Gram Sabha is mandatory prior to grant of prospecting license for minor minerals. 3) Gram Sabha owns minor forest produce. 4) Every Panchayat at the village level shall be required to obtain from the Gram Sabha a certification of utilisation of funds.
a. 1, 2 and 3 b. 1, 2 and 4
c. 2, 3 and 4 d. All of the above

72. Which of the following are functional items in the Twelfth Schedule of the Constitution?
1) Roads and bridges.
2) Urban forestry.
3) Urban poverty alleviation.
4) Non-conventional energy sources.
5) Regulation of land use.
a. 1, 2, 5 b. 1, 2, 3, 5
c. 2, 3, 4 d. 1, 3

73. Which of the following are urban local government bodies?
1) Pollution Control Boards.
2) Township.
3) Port Trust.
4) Town Area Committee.
5) Urban Development Authorities.
a. 1, 2, 4 and 5 b. 2, 3 and 4
c. 2 and 3 only d. All of the above

74. Which of the following are true regarding Municipal Corporation and Municipality?
1) Mayor is mostly elected for one year.
2) Municipal Commissioner is indirectly elected by the elected members of the Municipal Corporation.
3) President of Municipality has executive powers.
a. 1, 2 b. 2, 3
c. 1, 3 d. All of the above

75. Which of the following are true?
1) District Planning Committees are not mentioned in the constitution.
2) 2/3rd of the members of a metropolitan planning committee should be elected by the elected members of the municipalities and chairpersons of the Panchayats in the metropolitan area.
3) 4/5th of the members of a district planning committee should be elected by the elected members of the Panchayat at district level and municipalities in district.
a. 1, 2 b. 1, 3
c. 2, 3 d. All of the above

Correct Answers: 71.D 72.B 73.D 74.D 75.C

UNIVERSAL COACHING CENTRE
Vijayanagar, Bangalore 560040
Ph No: 080 23396403/409/23397437
Website: www.uccindia.org

ಕೆಎಎಸ್ / ಪಿಎಸ್‌ಐ / ಎಫ್‌ಡಿಎ ಮತ್ತು ಇತರ ತರಬೇತಿ

70. ಭಾರತದಲ್ಲಿ ಸ್ವದೇಶಿ ಚಳವಳಿ ಆರಂಭಗೊಂಡಿದ್ದು.
ಎ) ಗಾಂಧೀಜಿಯವರ ಚಂಪಾರಣ್ಯ ಸತ್ಯಾಗ್ರಹ
ಬಿ) ರೌಲಟ್ ಆಕ್ಟ್ ವಿರುದ್ಧದ ಚಳವಳಿ
ಸಿ) ಬಂಗಾಳದ ವಿಭಜನೆಯ ವಿರುದ್ಧದ ಚಳವಳಿ
ಡಿ) 1919-22ರ ಮೊದಲ ಅಸಹಕಾರ ಚಳವಳಿ
ಉತ್ತರ: ಸಿ) ಬಂಗಾಳದ ವಿಭಜನೆಯ ವಿರುದ್ಧದ ಚಳವಳಿ.
ವಿವರಣೆ: 1905ರಲ್ಲಿ ವೈಸ್‌ರಾಯ್ ಲಾರ್ಡ್ ಕರ್ಜನ್ ಬಂಗಾಳ ವಿಭಜನೆಯ ಆಜ್ಞೆಯನ್ನು ಹೊರಡಿಸಿದನು. ಇದು ಅನೇಕ ರಾಷ್ಟ್ರೀಯವಾದಿಗಳಿಗೆ ಆಘಾತ ಉಂಟುಮಾಡಿತು. ಬಂಗಾಳವನ್ನು ವಿಭಜಿಸಿ ಶಕ್ತಿ ಛಿದ್ರಿಸುವ ಪ್ರಯತ್ನ ನಡೆಯಿತು. ವಿಭಜನೆಯನ್ನು ಪ್ರಮುಖ ರಾಷ್ಟ್ರೀಯ ನಾಯಕರು ವಿರೋಧಿಸಿ ಚಳವಳಿ ಮತ್ತು ಪ್ರತಿಭಟನೆಗಳನ್ನು ಆರಂಭಿಸಿದರು. ಬಂಗಾಳ ವಿಭಜನೆ ಸ್ವದೇಶಿ ಚಳವಳಿ ಮತ್ತು ವಿದೇಶಿ ವಸ್ತುಗಳ ಬಹಿಷ್ಕಾರ ಚಳವಳಿಗೆ ನಾಂದಿ ಹಾಡಿತು.

71. ಧ್ವಜ ಸತ್ಯಾಗ್ರಹ ನಡೆದ ಶಿವಪುರ ಸದ್ಯ ಈ ಜಿಲ್ಲೆಯಲ್ಲಿದೆ.
ಎ) ಮೈಸೂರು ಬಿ) ಚಾಮರಾಜನಗರ
ಸಿ) ಹಾಸನ ಡಿ) ಮಂಡ್ಯ
ಉತ್ತರ: ಡಿ) ಮಂಡ್ಯ.
ವಿವರಣೆ: ಶಿವಪುರ ಕಾಂಗ್ರೆಸ್ ಧ್ವಜ ಸತ್ಯಾಗ್ರಹ, 1938 ಏ. 11ರಂದು ನಡೆಯಿತು. ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹಾಗೂ ಜವಾಬ್ದಾರಿ ಸರ್ಕಾರ ಸ್ಥಾಪನೆ ಸತ್ಯಾಗ್ರಹ ನಡೆಯಿತು. ಶಿವಪುರ (ಮಂಡ್ಯ ಜಿಲ್ಲೆ) ಕಾಂಗ್ರೆಸ್ ಧ್ವಜ ಸತ್ಯಾಗ್ರಹ ಇತಿಹಾಸದಲ್ಲಿ ಪ್ರಾಮುಖ್ಯತೆ ಪಡೆದಿದೆ.

72. ಪೆರಿಯಾರ್ ಸರೋವರ ಯಾವ ರಾಜ್ಯದಲ್ಲಿದೆ ?
ಎ) ತಮಿಳುನಾಡು ಬಿ) ಕೇರಳ
ಸಿ) ಆಂಧ್ರಪ್ರದೇಶ ಡಿ) ಒರಿಸ್ಸಾ
ಉತ್ತರ: ಬಿ) ಕೇರಳ.
ವಿವರಣೆ: ಪೆರಿಯಾರ್ ಸರೋವರವನ್ನು ಪೆರಿಯಾರ್ ನದಿಗೆ ಅಡ್ಡಲಾಗಿ ಕೇರಳದಲ್ಲಿ 1887ರಲ್ಲಿ ನಿರ್ಮಿಸಲಾಯಿತು. ಇದು 176 ಅಡಿ ಎತ್ತರವಿದೆ. ಈ ಸರೋವರ ಕೇರಳದಲ್ಲಿದ್ದರೂ ನಿರ್ವಹಣೆ ತಮಿಳುನಾಡು ಸರ್ಕಾರದ್ದು. ಪ್ರಸ್ತುತ 142 ಅಡಿ ಮಾತ್ರ ನೀರು ನಿಲ್ಲಿಸಲಾಗುತ್ತಿದೆ. ಬಹುಪಾಲು ನೀರನ್ನು ತಮಿಳುನಾಡು ಕೃಷಿ, ಕುಡಿಯುವ ನೀರು ಹಾಗೂ ವಿದ್ಯುತ್ ಉತ್ಪಾದನೆಗೆ ಬಳಸುತ್ತಿದೆ. ಆದರೆ ಹೆಚ್ಚು ನೀರಿನ ಅವಶ್ಯಕತೆ ಇದೆ ಎಂಬುದನ್ನು ತೋರಿಸಿ ತಮಿಳುನಾಡು ಸರ್ಕಾರ ಡ್ಯಾಂನ ಎತ್ತರ ಹೆಚ್ಚಿಸಲು ಮುಂದಾಯಿತು. ಇದಕ್ಕೆ ಸಂಬಂಧಿಸಿದಂತೆ 2006ರ ಫೆಬ್ರವರಿ 27ರಂದು ಸುಪ್ರೀಂ ಕೋರ್ಟ್ ಡ್ಯಾಂ ನೀರಿನ ಸಂಗ್ರಹ 152ಅಡಿಗೆ ಹೆಚ್ಚಿಸಲು ಅನುಮತಿ ನೀಡಿತು. ಆದರೆ ಇದಕ್ಕೆ ಕೇರಳ ಸರ್ಕಾರ ವಿರೋಧಿಸಿತು.

73. ಚಹಾವನ್ನು ಭಾರತಕ್ಕೆ ಪರಿಚಯಿಸಿದವರು ?
ಎ) ಪೋರ್ಚುಗೀಸರು ಬಿ) ಡಚ್ಚರು
ಸಿ) ಫ್ರೆಂಚರು ಡಿ) ಇಂಗ್ಲಿಷರು
ಉತ್ತರ: ಎ) ಪೋರ್ಚುಗೀಸರು.
ವಿವರಣೆ: ಭಾರತಕ್ಕೆ ಜಲಮಾರ್ಗ ಕಂಡು ಹಿಡಿದವ ಪೋರ್ಚುಗಲ್ ನಾವಿಕ ವಾಸ್ಕೋಡಿಗಾಮ. ಪೋರ್ಚುಗೀಸರು ಭಾರತಕ್ಕೆ ವ್ಯಾಪಾರಕ್ಕೆ ಬಂದ ಮೊದಲ ಯುರೋಪಿಯನ್ನರು. ಭಾರತಕ್ಕೆ ಬಂದ ಮೊದಲ ಪೋರ್ಚುಗಲ್ ವೈಸ್‌ರಾಯ್ ಫ್ರಾನ್ಸಿಸ್ಕೋ ಡಿ ಅಲ್ಮಿಡ. ಡಿಯು, ದಾಮನ್ ಮತ್ತು ಗೋವಾಗಳು 1961ರವರೆಗೆ ಪೋರ್ಚುಗೀಸರ ವಶದಲ್ಲಿದ್ದವು.

74. ಮಾನವನ ಮುಖದಲ್ಲಿರುವ ಒಟ್ಟು ಎಲುಬುಗಳ ಸಂಖ್ಯೆ
ಎ) 14 ಬಿ) 18 ಸಿ) 10 ಡಿ) 22
ಉತ್ತರ: ಎ) 14
ವಿವರಣೆ: ಮಾನವನ ವಿವಿಧ ಭಾಗಗಳಲ್ಲಿರುವ ಮೂಳೆಗಳ ಸಂಖ್ಯೆ

ತಲೆಬುರುಡೆ	- 18
ಮುಖ	- 14
ಒಳಕಿವಿ (ಎರಡೂ)	- 3+ 3
ಬೆನ್ನುಮೂಳೆ	- 24
ಭುಜ (ಎರಡೂ)	- 2 + 2
ಸೊಂಟ	- 2
ಎದೆಗೂಡು	- 25
ಕೈ (ಎರಡೂ)	- 26
ಹಸ್ತ (ಎರಡೂ)	- 54
ಕಾಲು (ಎರಡೂ)	- 8
ಪಾದ (ಎರಡೂ)	- 52
ಒಟ್ಟು	- 206

COPPER AGE
Study circle for competitive exams Bengaluru , Davanagere , Dharawada PH: 9108456733 / 9686058863

ಸಾಮಾನ್ಯ ಜ್ಞಾನ ಪ್ರಶ್ನೋತ್ತರಗಳು

1. ಅಮೆರಿಕಾ ಹಾಗೂ ಸೋವಿಯತ್ ಒಕ್ಕೂಟದ ನಡುವಿನ ಮಧ್ಯಂತರ ಶ್ರೇಣಿಯ ಅಣು ಬಲಗಳ ಒಪ್ಪಂದದ ಅವಧಿಯು ಎಷ್ಟು?
ಎ) 50 ವರ್ಷಗಳು ಬಿ) 150 ವರ್ಷಗಳು
ಸಿ) ಅನಿಯಮಿತ ಡಿ) 200 ವರ್ಷಗಳು

2. ಯಾವ ಆಟದಿಂದ ದಕ್ಷಿಣ ಕೋರಿಯಾದ ಕಿಸಂಗ್-ಯಂಗ್ ಇವರು ತಮ್ಮ ನಿವೃತ್ತಿಯನ್ನು ಘೋಷಿಸಿದ್ದಾರೆ?
ಎ) ಫುಟ್‌ಬಾಲ್ ಬಿ) ಬಾಸ್ಕೇಟ್‌ಬಾಲ್
ಸಿ) ಹಾಕಿ ಡಿ) ಕ್ರಿಕೆಟ್

3. ಟ್ರಾನ್ಸಪರೆನ್ಸಿ ಇಂಟರ್‌ನ್ಯಾಶನಲ್‌ನ 2018ರ ಭಷ್ಟಾಚಾರ ಗ್ರಹಿಕೆ ಸೂಚ್ಯಾಂಕದ ಪ್ರಕಾರ ಭಾರತವು ಎಷ್ಟನೇ ಸ್ಥಾನದಲ್ಲಿದೆ?
ಎ) 52 ಬಿ) 62 ಸಿ) 78 ಡಿ) 85

4. ಈ ಕೆಳಗಿನ ಯಾವ ರಾಜ್ಯವು ಡಾಲ್ಫಿನ್‌ನ್ನು ರಾಜ್ಯದ ಜಲವಲಯದ ಪ್ರಾಣಿ ಎಂದು ಘೋಷಿಸಿದೆ?
ಎ) ಆಂಧ್ರಪ್ರದೇಶ ಬಿ) ಕೇರಳ
ಸಿ) ಕರ್ನಾಟಕ ಡಿ) ಪಂಜಾಬ್

5. ಶೈಕ್ಷಣಿಕ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತರಲು ಸಿಕ್ಕಿಂ ರಾಜ್ಯವು ಈ ಕೆಳಗಿನ ಯಾವ ಕಂಪನಿಯೊಂದಿಗೆ ತಿಳುವಳಿಕೆಯ ಸ್ಮರಣಿಕೆಗೆ ಸಹಿ ಹಾಕಿದೆ?
ಎ) ಇನ್ಫೋಸಿಸ್ ಬಿ) ICS
ಸಿ) ಮೈಕ್ರೋಸಾಫ್ಟ್ ಡಿ) ಇಂಟೆಲ್

6. ಏರೋ ಇಂಡಿಯಾದ 12ನೇ ಆವೃತ್ತಿಯು ಇತ್ತೀಚೆಗೆ ಯಾವ ನಗರದಲ್ಲಿ ನಡೆಯಿತು?
ಎ) ನವದೆಹಲಿ ಬಿ) ಬೆಂಗಳೂರು
ಸಿ) ಕೋಲ್ಕತ್ತಾ ಡಿ) ಚೆನ್ನೈ

7. 2019ರ ಏಷ್ಯನ್ ಕಪ್ ಫುಟ್‌ಬಾಲ್ ಪಂದ್ಯಾವಳಿಯನ್ನು ಜಯಿಸಿದ ರಾಷ್ಟ್ರ ಯಾವುದು?
ಎ) ಭಾರತ ಬಿ) ಪಾಕಿಸ್ತಾನ
ಸಿ) ಕತಾರ್ ಡಿ) ಇರಾನ್

8. ಯಾವ ಅಂತರಾಷ್ಟ್ರೀಯ ಸಂಸ್ಥೆಯು "ಫ್ಯೂಚರ್ ಆಫ್ ದಿ ರೇಲ್" ಎಂಬ ಪ್ರಪ್ರಥಮ ಜಾಗತಿಕ ವರದಿಯನ್ನು ತಯಾರಿಸಿದೆ?
ಎ) ಗ್ರೀನ್ ಪೀಸ್
ಬಿ) IEA (Internation Energy Agency)
ಸಿ) ವಿಶ್ವ ಆರೋಗ್ಯ ಸಂಸ್ಥೆ
ಡಿ) IUCN

9. ಕಾರ್ಪೋರೇಶನ್ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನಾಗಿ ಯಾರನ್ನು ನೇಮಕ ಮಾಡಲಾಗಿದೆ?
ಎ) ಪಿ.ವಿ. ಭಾರತಿ
ಬಿ) ಕರ್ಣಮ ಶೇಖರ
ಸಿ) ಜೈಕುಮಾರ ಗಾರ್ಗ್
ಡಿ) ಪಿ.ಎಸ್. ಜಯಕುಮಾರ

1-ಸಿ, 2-ಎ, 3-ಸಿ, 4-ಡಿ, 5-ಸಿ, 6-ಬಿ, 7-ಸಿ, 8-ಬಿ, 9-ಎ

IAS My Dream
ಮಾಹಿತಿ ಸೌಜನ್ಯ : ಚಾಣಕ್ಯ ಕರಿಯರ್ ಅಕಾಡೆಮಿ, ವಿಜಯಪುರ.
ಫೋನ್ ನಂ : 08352-222197, 9880957562 (SMS ಗಾಗಿ ಮಾತ್ರ)

ಸಾಮಾನ್ಯ ಅಧ್ಯಯನ (General Studies) KAS, EXCISE SI, PSI, RPF, PC, B.Ed/D.Ed TET & CET ಇತ್ಯಾದಿ ನೇಮಕಾತಿ ಪರೀಕ್ಷೆಗಳಿಗಾಗಿ ಮಾದರಿ ಪ್ರಶ್ನೋತ್ತರಗಳು

1. ಕಾಯಿಲೆ ಹಾಗೂ ನ್ಯೂನ್ಯತಾ ಪೋಷಕಾಂಶಕ್ಕೆ ಸಂಬಂಧಿಸಿದಂತೆ ಪಟ್ಟಿ-1 ಹಾಗೂ ಪಟ್ಟಿ-2ನ್ನು ಸರಿಯಾಗಿ ಹೊಂದಿಸಿ ಬರೆಯಿರಿ.

ಪಟ್ಟಿ-1	ಪಟ್ಟಿ-2
ಎ) ಫ್ರೈನೋಡರ್ಮ	1) ವಿಟಮಿನ್-ಎ
ಬಿ) ಕ್ವಾಷಿಯೋರಕರ್	2) ಪ್ರೋಟೀನ್ ಮತ್ತು ಕಾರ್ಬೋಹೈಡ್ರೇಟ್‌ಗಳು
ಸಿ) ಪೋಷಣಾ ಮರಾಸ್ಮಸ್	3) ಕೊಬ್ಬು
ಡಿ) ಇರುಳುಗಣ್ಣು	4) ಪ್ರೋಟೀನ್‌ಗಳು

ಸಂಕೇತಗಳು

	ಎ	ಬಿ	ಸಿ	ಡಿ
1)	2	3	4	1
2)	3	4	2	1
3)	1	2	3	4
4)	2	3	4	1

2. ಕೆಳಗಿನ ಮಾಹಿತಿಗಳನ್ನು ಗಮನಿಸಿರಿ.
ಎ) 'ಲ್ಯಾಕ್ಟೋಬ್ಯಾಸಿಲಸ್' ಎಂಬ ಬ್ಯಾಕ್ಟೀರಿಯಾದ ಸಹಾಯದಿಂದ ಹಾಲು ಮೊಸರಾಗುತ್ತದೆ.
ಬಿ) ಯೀಸ್ಟ್ ಎಂಬ ಶಿಲೀಂಧ್ರದಿಂದಾಗಿ ಬೇಕರಿಯಲ್ಲಿ ಕೊಂಡುಕೊಳ್ಳುವ ಕೇಕ್ ಮೃದು ಮತ್ತು ಸ್ಪಂಜಿನಂತಿರುತ್ತದೆ.
ಸಂಕೇತಗಳ ಸಹಾಯದಿಂದ ಸರಿ ಆಯ್ಕೆ ಗುರುತಿಸಿರಿ.
1) ಎ ಸರಿ, ಬಿ ತಪ್ಪು 2) ಎ ತಪ್ಪು, ಬಿ ಸರಿ
3) ಎ ಸರಿ, ಬಿ ಸರಿ 4) ಎ ತಪ್ಪು, ಬಿ ತಪ್ಪು

3. ಈ ಕೆಳಗಿನವುಗಳಲ್ಲಿ ಸರಿ ಆಯ್ಕೆ ಗುರುತಿಸಿರಿ.
1) ಆಕಾಶದಲ್ಲಿ ಮಿಂಚು ಉಂಟಾದಾಗ ವಾತಾವರಣದಲ್ಲಿರುವ ನೈಟ್ರೋಜನ್, ಆಕ್ಸಿಜನ್‌ನೊಂದಿಗೆ ಸಂಯೋಗ ಹೊಂದಿ ನೈಟ್ರೋಜನ್‌ನ ಆಕ್ಸೈಡ್‌ಗಳನ್ನು ಉಂಟುಮಾಡುತ್ತದೆ.
2) ನೈಟ್ರಿಕ್ ಆಮ್ಲವು ಮಣ್ಣಿನಲ್ಲಿರುವ ಲೋಹೀಯ ಅಯಾನ್‌ಗಳೊಂದಿಗೆ ಪ್ರತಿವರ್ತಿಸಿ ಸಸ್ಯಗಳು ಹೀರಿಕೊಳ್ಳುವಂತಹ ನೈಟ್ರೇಟ್‌ಗಳಾಗಿ ಪರಿವರ್ತನೆ ಹೊಂದುತ್ತದೆ.
3) ಪ್ರೋಟೀನ್‌ಗಳು, ನೈಟ್ರೋಜನ್ ಸಂಯುಕ್ತಗಳ ತ್ಯಾಜ್ಯಗಳು ಮತ್ತು ಪ್ರಾಣಿಗಳ ವಿಸರ್ಜಿತ ವಸ್ತುಗಳು ವಿಘಟನೆ ಒಳಪಟ್ಟು ಅಮೋನಿಯಾ ಆಗುವುದನ್ನು ಅಮೋನೀಕರಣ ಎನ್ನುವರು.
4) ಮೇಲಿನ ಎಲ್ಲವೂ ಸರಿ

4. ಈ ಕೆಳಗಿನ ಯಾವ ರಾಜ್ಯ ಸಿಹಿ ನೀರಿನ ಸರೋವರಗಳಿಗೆ ಹೆಸರುವಾಸಿಯಾಗಿದೆ?
1) ಜಮ್ಮು ಮತ್ತು ಕಾಶ್ಮೀರ
2) ಹಿಮಾಚಲ ಪ್ರದೇಶ
3) ಕೇರಳ
4) ಅರುಣಾಚಲ ಪ್ರದೇಶ

ಉತ್ತರಗಳು: 1.2 2.3 3.4 4.1

ಸಹಯೋಗ: ದ ಕ್ಲಾಸಿಕ್ ಕೆಎಎಸ್ & ಐಎಎಸ್ ಸ್ಟಡಿ ಸರ್ಕಲ್ ಮತ್ತು ಸ್ಪರ್ಧಾ ಸ್ಫೂರ್ತಿ ಮಾಸಪತ್ರಿಕೆ, ಧಾರವಾಡ ದೂರವಾಣಿ: 9980552080/82

Scanned by CamScanner

ಟಿಡಿಎಸ್ ದಾಖಲೆಗಳನ್ನು ಬಳಸಿಕೊಂಡು ಪ್ರೀ ಫಿಲ್ಡ್ ಇನ್‌ಕಮ್ ಟ್ಯಾಕ್ಸ್ ರಿಟರ್ನ್ಸ್ ವ್ಯವಸ್ಥೆ ಜಾರಿಗೆ ತರುವ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆ. ಈ ಪರಿಕಲ್ಪನೆ ಹುಟ್ಟಿಕೊಂಡಿದ್ದು ಯಾವಾಗ? ಇದರಿಂದಾಗುವ ಒಳಿತು ಮತ್ತು ಕೆಡುಕುಗಳೇನು? ಇವುಗಳ ವಿವರ ಇಲ್ಲಿದೆ.

ಪ್ರೀ ಫಿಲ್ಡ್ ಇನ್‌ಕಮ್ ಟ್ಯಾಕ್ಸ್ ರಿಟರ್ನ್ಸ್ ವ್ಯವಸ್ಥೆ

2002ರಲ್ಲಿ ಮೊದಲ ಬಾರಿ ಆಗಿನ ವಿತ್ತ ಸಚಿವರಾಗಿದ್ದ ಜಸ್ವಂತ್ ಸಿಂಗ್ ತೆರಿಗೆ ವ್ಯವಸ್ಥೆಯನ್ನು ಸರಳೀಕರಿಸಬೇಕೆಂದು ಅಭಿಪ್ರಾಯಪಟ್ಟರು. ಸರಳತೆ ಮತ್ತು ತರ್ಕಬದ್ಧವಾಗಿಸುವುದು ಜಸ್ವಂತ್ ಸಿಂಗ್ ಅಭಿಪ್ರಾಯವಾಗಿತ್ತು. ಹಣಕಾಸು ಸಚಿವಾಲಯ ಟ್ಯಾಕ್ಸ್ ರಿಟರ್ನ್ಸ್ ಫಾರ್ಮ್ಯಾಟ್ ಅನ್ನು ವಿಮರ್ಶಿಸಲು ಕೈಗೆತ್ತಿಕೊಂಡಿತು. ಆಗಿನ ಸಮಯದಲ್ಲಿ ಟ್ಯಾಕ್ಸ್ ರಿಟರ್ನ್ಸ್ ಫಾರ್ಮ್‌ಗಳು ತೀರಾ ಉದ್ದಕ್ಕಿರುತ್ತಿತ್ತು. 10 ಪುಟಗಳನ್ನೂ ಮೀರಿ ಇರುತ್ತಿತ್ತು.

ಆದಾಯ ಇಲಾಖೆ ಅಧಿಕಾರಿಗಳು ಪ್ರಸ್ತಾವಿತ ಸರಳ್ ಫಾರ್ಮ್‌ನ ಸ್ಯಾಂಪಲ್ ಅನ್ನು ಸಿಂಗ್ ಅವರಿಗೆ ಸಲ್ಲಿಸಿದಾಗ ಫಾರ್ಮ್ ತೀರಾ ಕ್ಲಿಷ್ಟವಾದ ಪ್ರಕ್ರಿಯೆಯನ್ನು ಹೊಂದಿರುವುದನ್ನು ಗಮನಿಸಿದ್ದರು. ಹೀಗಾಗಿ ಅಧಿಕಾರಿಗಳ ಮೇಲೆ ಒತ್ತಡ ಹೇರಿ ಇನ್ನಷ್ಟು ಸರಳ ಫಾರ್ಮ್ ರೂಪಿಸುವಂತೆ ಸೂಚಿಸಿದರು. ಕೆಲ ತಿಂಗಳ ಬಳಿಕ 2003-04ರ ಬಜೆಟ್‌ನಲ್ಲಿ ಸಿಂಗ್ ಸರಳ ಮತ್ತು ಮುಂದಾಲೋಚನೆ ಹೊಂದಿರುವ ತೆರಿಗೆ ವ್ಯವಸ್ಥೆಯನ್ನು ಜಾರಿಗೆ ತರುತ್ತಿರುವುದಾಗಿ ಹೇಳಿದರು. ಇದರ ಭಾಗವಾಗಿ 1 ಪುಟದ ರಿಟರ್ನ್ ಫಾರ್ಮ್ ಅನ್ನು ಪರಿಚಯಿಸಿದರು. ಕಂಪ್ಯೂಟರ್ ಆಧರಿತ ವ್ಯವಸ್ಥೆಯನ್ನು ಜಾರಿಗೆ ತಂದರು. ರಿಟರ್ನ್ಸ್ ಮೊತ್ತ ನೇರವಾಗಿ ತೆರಿಗೆದಾರರ ಬ್ಯಾಂಕ್ ಖಾತೆಗೆ ತಲುಪುವಂತ ವ್ಯವಸ್ಥೆ ಮಾಡಿದರು.

ಈ ಪರಿಕಲ್ಪನೆ ಆರಂಭ: ಇದೇ ಸಮಯದಲ್ಲಿ ವಿತ್ತ ಸಚಿವರ ಸಲಹೆಗಾರ ವಿಜಯ್ ಕೇಲ್ಕರ್ ಸಮಿತಿ ನೀಡಿದ ಶಿಫಾರಸುಗಳನ್ನು ಆಧರಿಸಿ ಟ್ಯಾಕ್ಸ್ ಇನ್ಫಾರ್ಮೇಷನ್ ನೆಟ್‌ವರ್ಕ್(ಟಿನ್) ಆರಂಭಿಸಲು ಸರ್ಕಾರ ನಿರ್ಧರಿಸಿತು. ಇದರ ಧನಾತ್ಮಕ ಪ್ರಭಾವಗಳು ಈಗ ಸ್ಪಷ್ಟವಾಗಿ ಗೋಚರಿಸುತ್ತಿದೆ.

ಇದೀಗ ಸರ್ಕಾರ ಪ್ರಿಫಿಲ್ಡ್ ಇನ್‌ಕಮ್ ಟ್ಯಾಕ್ಸ್ ರಿಟರ್ನ್ಸ್ ಫಾರ್ಮ್ ನೀಡಲು ನಿರ್ಧರಿಸಿದೆ. ಇದಕ್ಕೆ ಬ್ಯಾಂಕ್‌ಗಳು, ಇತರ ಏಜೆನ್ಸಿಗಳು ಮತ್ತು ನೌಕರಿ ನೀಡಿರುವ ಸಂಸ್ಥೆ ಸಿಬ್ಬಂದಿ ಬಗ್ಗೆ ಆದಾಯ ತೆರಿಗೆ ಇಲಾಖೆಗೆ ನೀಡಿರುವ ಮಾಹಿತಿಗಳನ್ನು ಬಳಸಿಕೊಳ್ಳಲು ಮುಂದಾಗಿದೆ.

ಮಾಹಿತಿ ಮಿತ್ರ

ಟ್ಯಾಕ್ಸ್ ಆಡ್ಮಿನಿಸ್ಟ್ರೇಷನ್ ರಿಫಾರ್ಮ್ಸ್ ಕಮಿಷನ್ ನೀಡಿರುವ ಶಿಫಾರಸುಗಳನ್ನು ಆಧರಿಸಿ ಈ ವ್ಯವಸ್ಥೆಯನ್ನು ಜಾರಿಗೆ ತರಲು ನಿರ್ಧರಿಸಲಾಗಿದೆ. ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗಲೇ ಬ್ರಿಟನ್‌ನ ಆದಾಯ ತೆರಿಗೆ ಇಲಾಖೆಯಲ್ಲಿ ಕಾರ್ಯನಿರ್ವಹಿಸಿದ್ದ ಡಾ. ಪಾರ್ಥಸಾರಥಿ ಶೋಮ್ ಅವರ ನೇತೃತ್ವದಲ್ಲಿ ಈ ಕಮಿಷನ್ ಅನ್ನು ರೂಪಿಸಲಾಗಿತ್ತು. ಈ ಕಮಿಷನ್ ನೀಡಿರುವ ಶಿಫಾರಸುಗಳಲ್ಲಿ ಪ್ರಿ ಫಿಲ್ಡ್ ಫಾರ್ಮ್ ಪ್ರಮುಖವಾದುದು. ಇದರಲ್ಲಿ ಅಸೆಸ್ಸಿಂಗ್ ದಿ ರಿಟರ್ನ್ ಅಥವಾ ಮಾಡಿಪೈಯಿಂಗ್ ಸುಟಿಬಲಿ ಎನ್ನುವ ಆಯ್ಕೆಯನ್ನು ನೀಡಬೇಕು ಎಂದೂ ಸೂಚಿಸಲಾಗಿತ್ತು. ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ವ್ಯವಸ್ಥೆ ಇದನ್ನೂ ಒಳಗೊಂಡಿರಲಿದೆಯೇ ಎನ್ನುವುದು ತಿಳಿದಿಲ್ಲ.

ವಾಲಿಂಟರಿ ಫೈಲಿಂಗ್ ಆಫ್ ಟ್ಯಾಕ್ಸ್ ರಿಟರ್ನ್ಸ್ ಆರಂಭವಾದ ಮೇಲೆ ಟ್ಯಾಕ್ಸ್ ರಿಟರ್ನ್ಸ್ ಫೈಲಿಂಗ್ ಕಳೆದೊಂದು ದಶಕದಲ್ಲಿ ಭಾರಿ ಅಭಿವೃದ್ಧಿ ಕಂಡಿದೆ. 2017-18ರಲ್ಲಿ 6.84 ಕೋಟಿ ಐಟಿ ರಿಟರ್ನ್ಸ್ ಫೈಲ್ ಮಾಡಲಾಗಿದ್ದು, ಇದರಲ್ಲಿ 6.75 ಕೋಟಿ ಇ-ಫೈಲಿಂಗ್ ಮೂಲಕ ಆಗಿದೆ. ಅಂದರೆ ಶೇ. 98ರಷ್ಟು. ಈ ಮೂಲಕ ಭಾರತ ಅಮೆರಿಕವನ್ನು ಹಿಂದಿಕ್ಕಿದೆ. ಅಲ್ಲಿ ಇ ಫೈಲಿಂಗ್ ಪ್ರಮಾಣ ಶೇ. 90ಕ್ಕಿಂತಲೂ ಕೆಳಗಿದೆ.



ಬ್ಯಾಂಕಿಂಗ್ ಪರೀಕ್ಷಾ ಮಾರ್ಗದರ್ಶಿ Set 348

QUESTIONS ON DATA INTERPRETATION

Study the following Chart carefully and answer the questions given below:



1) The birth rate of which of the following countries is 20% less than that of Australia?;
Options: (1) France; (2) Bhutan; (3) Nepal; (4) Japan; (5) None of these;

2) The ratio of the number of countries having higher birth rate to the number of countries having lower birth rate than average is:
Options: (1) 4:3; (2) 2:5; (3) 5:2; (4) 1:6; (5) None of these

3) The average birth rate is by what per cent greater or lower than the birth rate of Australia?
Options: (1) 20% greater; (2) 20% lower;(3) 16- 2/3% lower; (4) 16-2/3 % greater; (5) None of these;

4) The pair of the birth rates of which of the following countries is equal?
Options: (1) Australia and Bhutan ; India; (2) France and Australia ; India and Bhutan; (3) U.S.A.; Australia and Japan; (4) Japan and Nepal; France;

5) The sum of the birth rates of Australia and France is how many times the sum of the birth rates of India and Bhutan?
Options: (1) 1.1; (2) 0.91; (3) 0.83; (4) 1.25; (5) None of these;

[Solutions –Tomorrow]

Answers to Set 347 – Reasoning Questions:

1) Ans.: 215; 2) Ans.: Three
3) Ans.: WV; 4) Ans.:56 : 26
5) Ans.: 5:18; 6) Ans.: 8

SOLUTIONS FOR SET – 347 NA QUESTIONS

1) Ans.(2) Given: Total number of students = 1840 Percentage of boys = 45%
Number of boys in the school = 45% of 1840 $= \frac{45}{100} \times 1840$; ∴ **Ans.** = 828 boys'

2) Ans.(3) Given: Total number of boys = 150. Absentee %age=10%; Pass %age = 80%
Number of boys = 150
Number of absentees $= \frac{10}{100} \times 150 = 15$
∴ No. of boys took exam = 150 – 15 = 135
No. of boys passed $= \frac{80}{100} \times 135 = 108$
∴ Number of boys failed =135–108 ***Ans.***= 27.

3) Ans.(3) Let the sales in 2010 be Rs.100
∴ Sales in 2011 = 100 – 20 = Rs.80
The sales of 2012 must be Rs.100
∴ Reqd. Increase in sales of 2011 = 100 – 80 = 20 ; ∴ % increase $= \frac{\text{increase}}{\text{original}} \times 100$;
$= \frac{20}{80} \times 100 = 25\%$; **Ans. 25 %**
i.e. Sales in 2012 must be increased by 25% to bring it to the sales level of 2010.

4) Ans.(1) Let the original price of rice be Rs.100 (i.e. before the increase)
∴ the price increase $= \frac{25}{100} \times 100 = \text{Rs. } 25$
New price of rice = 100 + 25 = Rs.125
To keep the expenditure as it is, she has to reduce Rs.25 on Rs.125
∴ % decrease $= \frac{\text{decrease}}{\text{original}} \times 100$
$= \frac{25}{125} \times 100 = \textit{Ans.}: 20\%.$

5) Ans.(2) Let the number of apples be = 100
Of which 10% are bad = 10
∴ Number of good ones = 100 – 10 = 90
80% is given to the orphanage $= \frac{80}{100} \times 90 =$ 72 ; So, balance is 90 – 72 = 18
∴ if balance is 18 apples, then total number is 100
if balance is 252 apples, then total number $= \frac{100}{18} \times 252 = 1400$
Ans: So, he had 1400 apples at first.

BReT Solutions
Above input provided by: **BReT Solutions Pvt. Ltd., (ಬ್ರೆಟ್ ಸೊಲ್ಯುಶನ್ಸ್ ಪ್ರೈ.ಲಿ.)**
A Centre for capacity building through online coaching & training for competitive exams & Bank CWEs & JAIIB/CAIIB/ DB&F Exams
Contact: +91 98445 16560 & 72590 28984/ 85 / 86/ 87/ 89 www.brets.in

ನಿರ್ಧಾರ ಕೈಗೊಳ್ಳುವುದು ಸುಲಭದ ಕೆಲಸವಲ್ಲ

ನಿರ್ಧಾರ ಎನ್ನುವುದು ನಮ್ಮ ಬದುಕಿನಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ದೈನಂದಿನ ಜೀವನದಲ್ಲಿ ಅನೇಕ ವಿಚಾರಗಳಿಗೆ ಸಂಬಂಧಿಸಿ ನಾವು ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ನಮ್ಮ ಗೆಲುವು ಅಥವಾ ಸೋಲು ನಮ್ಮ ನಿರ್ಧಾರವನ್ನೇ ಅವಲಂಬಿಸಿರುತ್ತದೆ. ಆದಕಾರಣ ನಿರ್ಧಾರ ಕೈಗೊಳ್ಳುವಾಗ ಸಾಕಷ್ಟು ಎಚ್ಚರಿಕೆ ವಹಿಸುವುದು ಅಗತ್ಯ. ಅಂದಹಾಗೇ ಸಂದರ್ಭಕ್ಕೆ ಅನುಸಾರವಾಗಿ ಸೂಕ್ತ ನಿರ್ಧಾರ ಕೈಗೊಳ್ಳುವುದು ಕೂಡ ಒಂದು ಕಲೆ. ನಿರ್ಧಾರ ಕೈಗೊಳ್ಳುವಾಗ ವ್ಯವಸ್ಥಿತವಾದ ಹಂತಗಳನ್ನು ಅನುಸರಿಸುವ ಮೂಲಕ ಗೆಲುವು ಸಾಧಿಸಲು ಸಾಧ್ಯವಿದೆ. ಹಾಗಾದ್ರೆ ನಿರ್ಧಾರ ಕೈಗೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸುವ ಹಂತಗಳು ಯಾವುವು?

■ಅನುಪಾ ಶೆಟ್ಟಿ



ಪೂರಕ ವಾತಾವರಣ ಸೃಷ್ಟಿಸಿ: ನೀವು ನಿರ್ಧಾರ ಕೈಗೊಳ್ಳುವ ಮುನ್ನ ಅದಕ್ಕೆ ಪೂರಕವಾದ ವಾತಾವರಣ ಸೃಷ್ಟಿಸಿ. ನಿಮ್ಮ ಯೋಜನೆಗಳು, ಯೋಚನೆಗಳನ್ನು ಒಂದಕ್ಕೊಂದು ತಾಳೆ ಹಾಕಿ ನೋಡಿ. ನಿಮ್ಮ ನಿರ್ಧಾರದಿಂದ ಉಂಟಾಗುವ ಪರಿಣಾಮಗಳು ಅಂದರೆ ಪ್ರಯೋಜನಗಳು, ಹಾನಿಗಳನ್ನು ವಿಶ್ಲೇಷಿಸಿ.

ಪರಿಸ್ಥಿತಿಯನ್ನು ವಿವರವಾಗಿ ವಿಶ್ಲೇಷಿಸಿ: ಯಾವುದೇ ಒಂದು ನಿರ್ಧಾರ ಕೈಗೊಳ್ಳುವ ಮುನ್ನ ಪರಿಸ್ಥಿತಿಯನ್ನು ವಿವರವಾಗಿ ಅಧ್ಯಯನ ಮಾಡಿ. ಒಂದು ವಿಷಯಕ್ಕೆ ಸಂಬಂಧಿಸಿ ನೀವು ಕೈಗೊಂಡ ನಿರ್ಧಾರ ಇನ್ನೊಂದು ವಿಚಾರದ ಮೇಲೆ ಪ್ರಭಾವ ಬೀರುವ ಸಾಧ್ಯತೆಯೂ ಇರುತ್ತದೆ. ಆದಕಾರಣ ಈಗಿರುವ ಪರಿಸ್ಥಿತಿ, ನಿರ್ಧಾರ ಕೈಗೊಂಡ ಬಳಿಕ ಎದುರಾಗುವ ಪರಿಸ್ಥಿತಿಯ ಬಗ್ಗೆ ಒಮ್ಮೆ ಸವಿವರವಾಗಿ ವಿಶ್ಲೇಷಿಸಿ. ಆ ಬಳಿಕ ಮುಂದಿನ ಕ್ರಮ ಕೈಗೊಳ್ಳಿ.

ಉತ್ತಮ ಪರ್ಯಾಯಗಳನ್ನು ಸೃಷ್ಟಿಸಿ: ಯಾವುದೇ ಒಂದು ವಿಚಾರಕ್ಕೆ ಸಂಬಂಧಿಸಿ ನಿರ್ಣಯ ಕೈಗೊಳ್ಳುವಾಗ ಒಂದು ಸಾಧ್ಯತೆಯ ಬದಲು ಅನೇಕ ಸಾಧ್ಯತೆಗಳನ್ನು ನಾವು ಸೃಷ್ಟಿಸಿಕೊಳ್ಳಬೇಕು. ಸಾಧ್ಯತೆಗಳು ಹೆಚ್ಚಿದ್ದಷ್ಟು ಅಪಾಯಗಳು ಕಡಿಮೆ ಇರುವ ಸಂಭವವಿರುತ್ತದೆ. ಒಂದು ದಾರಿ ನಮಗೆ ಕಷ್ಟಕರವೆನಿಸಿದರೆ ಪರ್ಯಾಯವಾದ ಇನ್ನೊಂದು ಮಾರ್ಗವನ್ನು ಆಯ್ದುಕೊಳ್ಳಬಹುದು. ಆದಕಾರಣ ಯಾವುದೇ ನಿರ್ಧಾರ ಕೈಗೊಳ್ಳುವ ಮುನ್ನ ಅದಕ್ಕೆ ಪೂರಕವಾದ ಮಾರ್ಗಗಳು ಯಾವುವು ಎಂಬುದನ್ನು ಕಂಡುಕೊಳ್ಳಿ.

ಪರ್ಯಾಯಗಳನ್ನು ವಿಶ್ಲೇಷಿಸಿ: ಲಭ್ಯವಿರುವ ಪರ್ಯಾಯ ಮಾರ್ಗಗಳನ್ನು ವಿಶ್ಲೇಷಣೆಗೊಳಪಡಿಸಿ. ಯಾವ ಮಾರ್ಗದಲ್ಲಿ ಸಾಗಿದರೆ ಯಶಸ್ಸು ಸಿಗಬಹುದು. ಯಾವ ಮಾರ್ಗದಲ್ಲಿ ಆಪತ್ತು (ರಿಸ್ಕ್) ಕಡಿಮೆಯಿದೆ ಎಂಬುದನ್ನು ಪರಿಶೀಲಿಸಿ. ಎಲ್ಲ ಮಾರ್ಗಗಳ ಅನುಕೂಲ ಹಾಗೂ ಅನನುಕೂಲಗಳ ಬಗ್ಗೆ ವಿಶ್ಲೇಷಿಸಿದ ಬಳಿಕ ಸೂಕ್ತ ನಿರ್ಧಾರ ಕೈಗೊಳ್ಳಿ.

ರಿಸ್ಕ್‌ಗಳನ್ನು ಪಟ್ಟಿ ಮಾಡಿ: ನೀವು ಕೈಗೊಂಡ ನಿರ್ಧಾರದಿಂದ ಎದುರಾಗುವ ರಿಸ್ಕ್‌ಗಳು ಯಾವುವು ಎಂಬುದನ್ನು ಪಟ್ಟಿ ಮಾಡಿ. ರಿಸ್ಕ್ ಎದುರಿಸುವುದು ಹೇಗೆ? ಅದರಿಂದ ಉಂಟಾಗುವ ಪರಿಣಾಮಗಳನ್ನು ಪಟ್ಟಿ ಮಾಡಿ. ಒಂದು ವೇಳೆ ಆ ನಿರ್ಧಾರದಿಂದ ಹಾನಿಯೇ ಹೆಚ್ಚಾಗುವುದಾದರೆ ಅದಕ್ಕೆ ಪರ್ಯಾಯವಾದ ಮಾರ್ಗ ಯಾವುದು ಮತ್ತು ಅದನ್ನು ನಾವು ಹೇಗೆ ಬಳಸಿಕೊಳ್ಳಬಹುದು ಎಂಬ ಬಗ್ಗೆ ಮೊದಲೇ ಯೋಜನೆ ರೂಪಿಸಿಕೊಳ್ಳಿ.

ನಿರ್ಧಾರದ ಬಗ್ಗೆ ಸಕಾರಾತ್ಮಕ ಅಭಿಪ್ರಾಯವಿರಲಿ: ಒಮ್ಮೆ ನಿರ್ಧಾರ ಕೈಗೊಂಡ ಬಳಿಕ ಅದರ ಬಗ್ಗೆ ಸದಾ ಸಕಾರಾತ್ಮಕವಾಗಿ ಯೋಚಿಸಿ. ನನ್ನ ನಿರ್ಧಾರ ಸರಿಯಾಗಿದೆಯೇ? ಎಂಬ ಅನುಮಾನ ಮೂಡದಂತೆ ನಿರ್ಧಾರದ ಅಯ್ಕೆ ಮಾಡಿ. ನಿಮ್ಮ ನಿರ್ಧಾರ ನಿಮ್ಮ ಆತ್ಮವಿಶ್ವಾಸ ಪ್ರತೀಕವಾಗಿರಬೇಕು. ಎಂಥದ್ದೇ ಸಂದರ್ಭ ಎದುರಾದರೂ ನಿರ್ಧಾರವನ್ನು ಸಮರ್ಥಿಸಿಕೊಳ್ಳುವ ಸಾಮರ್ಥ್ಯ ನಿಮ್ಮಲ್ಲಿರಬೇಕು. ಯಾವುದೇ ಕಾರಣಕ್ಕೂ ನಿಮ್ಮ ನಿರ್ಧಾರದ ಬಗ್ಗೆ ಅನುಮಾನಪಡಬೇಡಿ. ಬದಲಿಗೆ ನನ್ನ ನಿರ್ಧಾರ ಸರಿಯಾಗಿದೆ ಎಂಬ ಆಭಿಪ್ರಾಯವಿರಲಿ.



ಪದೇಪದೆ ನಿರ್ಧಾರ ಬದಲಾವಣೆ ಬೇಡ: ಒಂದು ನಿರ್ಧಾರ ಕೈಗೊಂಡ ಬಳಿಕ ಅದಕ್ಕೆ ಬದ್ಧರಾಗಿರಿ. ಯಾವುದೇ ಕಾರಣಕ್ಕೂ ನಿಮ್ಮ ನಿರ್ಧಾರವನ್ನು ಪದೇಪದೆ ಬದಲಾಯಿಸಬೇಡಿ. ಈ ರೀತಿ ನಿರ್ಧಾರಗಳನ್ನು ಬದಲಾಯಿಸುವುದರಿಂದ ನೀವು ಅಂದುಕೊಂಡ ಗುರಿ ತಲುಪಲು ಸಾಧ್ಯವಾಗದು. ಆದಕಾರಣ ನಿರ್ಧಾರ ಕೈಗೊಳ್ಳುವ ಮುನ್ನವೇ ಸಾವಧಾನವಾಗಿ ಯೋಚಿಸಿ ಮುಂದೆ ಸಾಗಬೇಕು. ಒಂದು ನಿರ್ಧಾರ ಅಂತಿಮ ಆಯ್ಕೆಯಾಗಿರಬೇಕು ಮತ್ತು ಅದೇ ಅತ್ಯುತ್ತಮ ಆಯ್ಕೆಯಾಗಿರಬೇಕು.

ಪ್ರತಿಕ್ರಿಯಿಸಿ: studentmitra12@gmail.com

Scanned by CamScanner

ಭಾರತೀಯ ಕಾವ್ಯ ಮೀಮಾಂಸೆ

ಭರತನ ಪ್ರಕಾರ ಕಾವ್ಯ ದೋಷಗಳ ಸಂಖ್ಯೆ - 10

ಆತ್ಮವಿಶ್ವಾಸ, ಪ್ರಾಮಾಣಿಕ ಪ್ರಯತ್ನ ಇದ್ದರೆ ಸಾಧನೆ

ಆತ್ಮವಿಶ್ವಾಸ, ಪ್ರಾಮಾಣಿಕ ಪ್ರಯತ್ನ, ತಂತ್ರಗಾರಿಕೆ, ಸಮಯದ ಮಹತ್ವ, ಗುರಿ ಸಾಧನೆಯ ಛಲವಿದ್ದರೆ ಎಂಥ ಕಠಿಣ ಪರಿಸ್ಥಿತಿ ಎದುರಾದರೂ ಸುಲಭವಾಗಿ ಗುರಿ ತಲುಪಬಹುದು. ಇದಕ್ಕೆ ಕೆಎಎಸ್, ಐಎಎಸ್, ಐಪಿಎಸ್‌ನಂಥ ಸ್ಪರ್ಧಾತ್ಮಕ ಪರೀಕ್ಷೆಗಳೂ ಹೊರತಲ್ಲ. ಓದಿನ ತಂತ್ರಗಾರಿಕೆಯಿಂದ ಶ್ರದ್ಧೆಯಿಂದ ಅದರಲ್ಲಿ ತಲ್ಲೀನರಾದರೆ ಯಾವುದೂ ಕಠಿಣವಲ್ಲ ಎನ್ನುತ್ತಾರೆ ತಂಬ್ರಹಳ್ಳಿಯ 'ಸುಣಗಾರ ರಾಘವೇಂದ್ರ'. ಇವರೇ ಇಂದಿನ ನಮ್ಮ ಸಂಡೇ ಗೆಸ್ಟ್.

www.mahitiloka.com

ಸಂಡೇ ಗೆಸ್ಟ್

| ಸುಣಗಾರ ರಾಘವೇಂದ್ರ
ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಪ್ರೊಬೇಷನರಿ), ಹೊಸಪೇಟೆ, ಬಳ್ಳಾರಿ ಜಿಲ್ಲೆ

■ ಹುಡೇಂ ಕೃಷ್ಣಮೂರ್ತಿ, ಹೊಸಪೇಟೆ

ಹೆಸರು ಸುಣಗಾರ ರಾಘವೇಂದ್ರ. ಹುಟ್ಟಿದ್ದು ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ತಂಬ್ರಹಳ್ಳಿಯಲ್ಲಿ. ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆ ಶಿಕ್ಷಣವನ್ನು ತಂಬ್ರಹಳ್ಳಿಯಲ್ಲಿ ಕಲಿತು, ಹಗರಿಬೊಮ್ಮನಹಳ್ಳಿಯಲ್ಲಿ ಪಿಯುಸಿ ಮುಗಿಸಿದರು. ಆ ನಂತರ ಚಿತ್ರದುರ್ಗ ಜಿಲ್ಲೆಯ ಮಲ್ಲಾಡಿಹಳ್ಳಿ ಶ್ರೀ ರಾಘವೇಂದ್ರಸ್ವಾಮಿ ಆಶ್ರಮದ ಕಾಲೇಜಿನಲ್ಲಿ ಟಿಸಿಎಚ್ ಪೂರೈಸಿದರು.

ಶಿಕ್ಷಕ ವೃತ್ತಿಯಿಂದ ಅಧಿಕಾರಿ ಹುದ್ದೆಗೆ: ಶಿಕ್ಷಕರಾಗಿ ಪಾಠ ಬೋಧಿಸುವ ವೇಳೆ ನೀವು ಚೆನ್ನಾಗಿ ಓದಿ ದೊಡ್ಡ ಮಟ್ಟದ ಅಧಿಕಾರಿಗಳಾಗಬೇಕು ಎಂದು ವಿದ್ಯಾರ್ಥಿಗಳಿಗೆ ಸಾಮಾನ್ಯವಾಗಿ ಹೇಳುವಾಗ, ಧುತ್ತೆಂದು ಎದುರಾದ ಪ್ರಶ್ನೆ 'ನೀವೇಕೆ ದೊಡ್ಡ ಆಫೀಸರ್ ಆಗಲಿಲ್ಲ ಸರ್' ಎಂಬುದಾಗಿತ್ತು. ಆ ಪ್ರಶ್ನೆಯೇ ನಾನು ಕೆಪಿಎಸ್‌ಸಿ ಪಾಸ್ ಮಾಡುವ ಕನಸು ಕಟ್ಟಿಕೊಳ್ಳಲು ದಾರಿಯಾಯಿತು. ಇದಕ್ಕೆ ಮನೆಯಲ್ಲಿ ಅಮ್ಮ, ಸಹೋದರರು, ಪತ್ನಿಯ ಸಹಮತ, ಸಹಕಾರವೂ ಸಿಕ್ಕಿತು. ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕು ನಾಗನೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 4 ವರ್ಷ ಪೂರೈಸಿ ರಾಯಚೂರು ಜಿಲ್ಲೆ ಮಾನ್ವಿ ತಾಲೂಕಿನ ಮರಕಮದಿನ್ನಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೆ. 2011ರಲ್ಲಿ ಯುಪಿಎಸ್‌ಸಿಗೆ ಮೊದಲ ಪ್ರಯತ್ನ ಮಾಡಿದ್ದ ಸಂದರ್ಭದಲ್ಲೇ ಪ್ರೌಢಶಾಲೆ ಶಿಕ್ಷಕರ ನೇಮಕಕ್ಕೆ ಪರೀಕ್ಷೆಯೂ ಇರುವುದರಿಂದ ಅದಕ್ಕೆ ಹೆಚ್ಚು ಒತ್ತು ಕೊಟ್ಟಿದ್ದರಿಂದ ಸಾಧ್ಯವಾಗಲಿಲ್ಲ. ಏನಾದರೂ ಸರಿಯೇ ಕೆಎಎಸ್ ಪಾಸ್ ಮಾಡಲೇಬೇಕೆಂಬ ಹೆಬ್ಬಯಕೆ ನನ್ನಲ್ಲಿ ಇತ್ತು. ಹೀಗಾಗಿ, ಭವಿಷ್ಯ ರೂಪಿಸಿಕೊಳ್ಳಲು ಶಾಲೆಗೆ ಬರುವ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ವೇಳಾಪಟ್ಟಿ ತಯಾರಿಸಿಕೊಂಡೆ. ಅದರಲ್ಲಿ ನಿತ್ಯ 6 ತಾಸು ಓದುವಂಥ ಸಮಯ ನಿಗದಿಪಡಿಸಿಕೊಂಡು, ಒಂದು ವಿಷಯವನ್ನು 1 ತಾಸು (45 ನಿಮಿಷ ಓದು, ಓದಿದ್ದನ್ನು ಮನನ ಮಾಡಿಕೊಳ್ಳುತ್ತಾ 15 ನಿಮಿಷ ಟಿಪ್ಪಣಿ ಬರೆಯುವುದು) ಓದುತ್ತಿದ್ದೆ.

ಮುಖ್ಯ ಪರೀಕ್ಷೆಗೆ ಬರವಣಿಗೆಯೇ ಬಹಳ ಪ್ರಮುಖ ಎನ್ನುವುದನ್ನು ತಿಳಿದು ಸಾಕಷ್ಟು ಬರೆಯುತ್ತಿದ್ದೆ. ಅಧ್ಯಯನಕ್ಕೆ ಬೇಕಾದ ಸಾಮಗ್ರಿಗಳನ್ನು ಹೊಂದಿಸಿಕೊಂಡು ಸಿಕ್ಕ ಸಮಯದಲ್ಲೇ ತಪಸ್ಸಿನಂತೆ ಓದುತ್ತಿದ್ದೆ. 2014ರ ಬ್ಯಾಚ್‌ನಲ್ಲಿ ಕೆಎಎಸ್ ಪರೀಕ್ಷೆ ಬರೆದು ಹೈದರಾಬಾದ್ ಕರ್ನಾಟಕ ಭಾಗಕ್ಕೆ 5ನೇ ರ‍್ಯಾಂಕ್ (ಎಸಿಸಿಟಿ)ನಲ್ಲಿ ಪಾಸಾದೆ. ವಿವಾಹಂ ವಿದ್ಯೆ ನಾಶಂ ಎನ್ನುವುದು ನಾಣ್ಣುಡಿಯಾದರೂ, ಸಾಧಿಸುವ ಛಲವಿದ್ದರೆ ಗುರಿ ಮುಟ್ಟಬಹುದು ಎನ್ನುತ್ತಾರೆ ಸುಣಗಾರ ರಾಘವೇಂದ್ರ ಅವರು.

ನೇಮಕಾತಿ ಕುರಿತು..

ಸಂದರ್ಶನ: ನಮ್ಮಲ್ಲಿನ ಜ್ಞಾನ ಸಂಪತ್ತು ಇದ್ದರೂ ಸಾಮಾಜಿಕ, ಆಡಳಿತಾತ್ಮಕ, ತುರ್ತು ಸಂದರ್ಭಗಳಲ್ಲಿ ನಿಭಾಯಿಸಬಹುದಾದ ಸಾಮರ್ಥ್ಯವನ್ನು ಸಂದರ್ಶನದಲ್ಲಿ ಕೇಳುವ ಮೂಲಕ ನಮ್ಮ ಮಾತು, ಆಂಗಿಕ ಭಾವ ಸೇರಿ ನಮ್ಮ ಕ್ರಿಯಾಶೀಲತೆಯನ್ನು ಸೂಕ್ಷ್ಮವಾಗಿ ಅವಲೋಕಿಸಲಾಗುತ್ತದೆ. ಪ್ರಶ್ನೆಯನ್ನು ಸಂಪೂರ್ಣವಾಗಿ ಆಲಿಸಿ, ಉತ್ತರವನ್ನು ಸ್ಪಷ್ಟ, ಪ್ರಾಮಾಣಿಕವಾಗಿ ನೀಡಬೇಕು. ನನಗೆ ಸಂದರ್ಶನದಲ್ಲಿ ಈಗಿನ ಶಿಕ್ಷಣ ಮತ್ತು ಹಿಂದಿನ ಶಿಕ್ಷಣಕ್ಕೆ ಏನು ವ್ಯತ್ಯಾಸವಾಗಿದೆ ? ಎನ್ನುವುದರ ಜತೆ ಕತೆ, ಕಾದಂಬರಿಗಳ ಆಸಕ್ತಿಯನ್ನು ಹೇಳಿದಾಗ ಎಸ್.ಎಲ್.ಭೈರಪ್ಪ ಅವರ ಪರ್ವ ಕಾದಂಬರಿಯ ಒಟ್ಟಾರೆ ಸಾರಾಂಶ ಏನು? ಎಂದು ಕೇಳಲಾಗಿತ್ತು.

ಓದಿನ ವಿಧಾನ ಹೀಗಿತ್ತು..

ಕೆಎಎಸ್ ಮುಖ್ಯ ಪರೀಕ್ಷೆಗೆ 'ಸಾರ್ವಜನಿಕ ಆಡಳಿತ' ಐಚ್ಛಿಕ ವಿಷಯವಾಗಿ ತೆಗೆದುಕೊಂಡಿದ್ದು, ಅದಕ್ಕೆ ಬೇಕಾದ ಸಾಮಗ್ರಿಯನ್ನು ಹೊಂದಿಸಿಕೊಂಡು ಓದಿದೆ. 5ರಿಂದ ಪಿಯುಸಿವರೆಗಿನ ಪಠ್ಯಪುಸ್ತಕಗಳನ್ನು ಓದಿ ರಿವೈಜ್ ಮಾಡಿದೆ. ದಿನಕ್ಕೆ ಮೂರ‍್ನಾಲ್ಕು ಪತ್ರಿಕೆಗಳನ್ನು ಓದುವಾಗಲೇ ಟಿಪ್ಪಣಿ ಬರೆಯುತ್ತಿದ್ದೆ. ಬರೆದಿದ್ದನ್ನೇ ಮತ್ತೆ ಮತ್ತೆ ಓದುತ್ತಿದ್ದೆ. ಸ್ವಯಂ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುತ್ತಾ ದಿನಕ್ಕೆ ಒಂದೆರಡು ಪ್ರಶ್ನೆಗಳನ್ನು ಸೃಷ್ಟಿಸಿ ಉತ್ತರ ಬರೆಯುತ್ತಿದ್ದೆ. ಮೊಬೈಲ್‌ನಿಂದ ದೂರ(ಓದಿಗೆ ಸಂಬಂಧಿಸಿದ್ದನ್ನು ನೋಡಲು ಹೊರತುಪಡಿಸಿ)ಇದ್ದು ಅಧ್ಯಯನದಲ್ಲಿ ತೊಡಗಿದ್ದೆ. ಪರೀಕ್ಷೆ ಪಾಸಾದವರಿಂದ ಕೆಲವು ಟಿಪ್ಸ್‌ಗಳನ್ನು ಪಡೆದು ಅತಿ ಕಡಿಮೆ ಸಮಯದಲ್ಲಿ ಹೆಚ್ಚು ಓದುವುದನ್ನು ರೂಢಿಸಿಕೊಂಡಿದ್ದೆ. ಪ್ರಮುಖವಾಗಿ ನನ್ನ ಸಹೋದರರಾದ ಮಂಜುನಾಥ ಮತ್ತು ಗೋವಿಂದ ಎನ್ನುವವರು ನಿತ್ಯ ಒಂದು ತಾಸು ನನ್ನ ಸಂದರ್ಶನ ನಡೆಸುತ್ತಿದ್ದರು. ಅದರಲ್ಲಿ ತಪ್ಪಾಗುವುದನ್ನು ತಿದ್ದಿಕೊಂಡು ಸಾಗಿದೆ. ಓದಿನ ತಂತ್ರಗಾರಿಕೆ, ಪ್ರಾಮಾಣಿಕ ಪ್ರಯತ್ನದ ಅಧ್ಯಯನದಿಂದ ಯಶಸ್ಸು ಸಾಧಿಸಬಹುದು ಎನ್ನುವುದು ಸುಣಗಾರ ರಾಘವೇಂದ್ರ ಅವರ ನಿಲುವು.

ಅಧ್ಯಯನ ಸಾಮಗ್ರಿ

- » ಪ್ರಬಂಧ - ಯೋಜನಾ ದಿನಪತ್ರಿಕೆಗಳು
- » ಇತಿಹಾಸ - ಡಾ.ಕೆ.ಸದಾಶಿವ
- » ಭೂಗೋಳ - ಡಾ.ರಂಗನಾಥ
- » ಭಾರತ ಸರ್ಕಾರ ಮತ್ತು ರಾಜಕೀಯ - ಪ್ರೊ.ಎಚ್.ಎಂ.ರಾಜಶೇಖರ
- » ಆಡಳಿತಾತ್ಮಕ ಸಿದ್ಧಾಂತ ಹಾಗೂ ಭಾರತೀಯ ಆಡಳಿತ - ಪ್ರೊ.ಎನ್.ಹಾಲಪ್ಪ
- » ವಿಜ್ಞಾನ ಮತ್ತು ತಂತ್ರಜ್ಞಾನ - ಜಿ.ಹರಿಪ್ರಸಾದ್
- » ಪರಿಸರ ಅಧ್ಯಯನ - ಕೆ.ಭೈರಪ್ಪ
- » ನೈತಿಕತೆ, ಸಮಗ್ರತೆ ಅಭಿಕ್ಷಮತೆ - ಪರಶುರಾಮ ಕಟ್ಟೀಮನಿ
- » ಕರ್ನಾಟಕ ಆರ್ಥಿಕ ಸಮೀಕ್ಷೆ
- » ಯೋಜನಾ, ಕುರುಕ್ಷೇತ್ರ
- » ಪ್ರಥಮ ಹಾಗೂ ದ್ವಿತೀಯ ಪಿಯುಸಿಯ ಪಠ್ಯಪುಸ್ತಕಗಳು ಮತ್ತು 8ರಿಂದ 10ನೇ ತರಗತಿಯ ವಿಜ್ಞಾನ, ಸಮಾಜ ವಿಜ್ಞಾನ ಪಠ್ಯಪುಸ್ತಕಗಳು
- » ಬದುಕಲು ಕಲಿಯಿರಿ - ಸ್ವಾಮಿ ಜಗದಾತ್ಮಾನಂದ.

ಆಕಾಂಕ್ಷಿಗಳಿಗೆ ಟಿಪ್ಸ್..

● ನಿರ್ದಿಷ್ಟ ಪುಸ್ತಕಗಳ ಸಂಗ್ರಹಣೆ ಜತೆ ಓದಿನ ವೇಳಾಪಟ್ಟಿ ಹಾಕಿಕೊಂಡು ಚಾಚೂ ತಪ್ಪದೆ ಪಾಲಿಸಬೇಕು. ವೃತ್ತಿ ಸೇರಿ ನಾನಾ ಒತ್ತಡವಂತೂ ಎಲ್ಲರಿಗೂ ಇರುತ್ತವಾದರೂ ಅಧ್ಯಯನಕ್ಕೆ ತೊಡಕಾಗದಂತೆ ಧ್ಯಾನಸ್ಥ ಮನೋಭಾವ ಹೊಂದಬೇಕು. ಸಮಯ ಸದ್ಬಳಕೆಗೆ ಒತ್ತು ನೀಡಿ ಅಧ್ಯಯನದಲ್ಲಿ ತೊಡಗಬೇಕು. ● ಮದುವೆ ಆದ ನಂತರ ವಿದ್ಯೆ ತಲೆಗೆ ಹತ್ತಲ್ಲ ಎಂದು ಬಹಳಷ್ಟು ಜನರು ಹೇಳುತ್ತಾರೆ. ಆದರೆ, ಸಾಧನೆ ಮಾಡಬೇಕೆಂಬ ಹಂಬಲವಿದ್ದರೆ ಯಾವ ಸಂದರ್ಭದಲ್ಲೂ ಮಾಡಬಹುದು. ವಿವಾಹದ ನಂತರವೂ ಡಾ.ಅಂಬೇಡ್ಕರ್ ಸೇರಿ ಹಲವರು ಮಾಡಿರುವ ಸಾಧನೆ ಸಾಕ್ಷಿಯಿದೆ. ಅಧ್ಯಯನಕ್ಕೆ ಪತ್ನಿ, ಕುಟುಂಬದವರ ಸಹಕಾರ ಇರುವಂತೆ ನೋಡಿಕೊಳ್ಳಬೇಕು.

● ನಕಾರಾತ್ಮಕ ವಿಷಯಗಳಿಗೆ ತಿಲಾಂಜಲಿ ಹಾಡಿ. ಅಧ್ಯಯನಕ್ಕೆ ಬೇಕಾದ ಪೂರಕ ವಿಷಯಗಳನ್ನು ಮತ್ತೆ ಮತ್ತೆ ಓದುವ, ಟಿಪ್ಪಣಿ ಬರೆದುಕೊಳ್ಳುವುದನ್ನು ಮರೆಯಬಾರದು.

● ಅಧ್ಯಯನಕ್ಕಾಗಿ ಪ್ರತಿದಿನದ ವೇಳಾಪಟ್ಟಿ ಇರಲಿ ■ ಒಂದು ವಿಷಯಕ್ಕೆ ಒಂದು ತಾಸು ಮೀಸಲಿರಲಿ ■ ಅಧ್ಯಯನ ಮಾಡುವಾಗ ಟಿಪ್ಪಣಿ ಮಾಡುವುದನ್ನು ರೂಢಿಸಿಕೊಳ್ಳಿ ■ ಪ್ರತಿ ವಿಷಯ ಓದಿನ ನಂತರ ನೀವು ಗ್ರಹಿಸಿದ್ದನ್ನು ನಿಮ್ಮದೇ ಶೈಲಿಯಲ್ಲಿ ಸಾರಾಂಶೀಕರಿಸಿ ■ ವಾರಕ್ಕೊಮ್ಮೆ ಸ್ವಯಂ ಪರೀಕ್ಷೆ, ಮೌಲ್ಯಮಾಪನ ಮಾಡುವುದು ಒಳಿತು. ಗ್ರಂಥಾಲಯಗಳಿಗೆ ತೆರಳಿ ಪುಸ್ತಕಗಳ ಅಧ್ಯಯನ ಜತೆಗೆ ದಿನಪತ್ರಿಕೆಗಳಲ್ಲಿನ ಪ್ರಮುಖ ವಿಷಯಗಳನ್ನು ಟಿಪ್ಪಣಿ ಮಾಡಿಕೊಳ್ಳಿ ■ ಇಂಟರ್ನೆಟ್‌ನಿಂದ ಮಾಹಿತಿ ಸಂಗ್ರಹಣೆಯ ಹವ್ಯಾಸ ಇರಲಿ.

HIRING

ದ.ಕ. ನ್ಯಾಯಾಲಯಗಳಲ್ಲಿ ಆದೇಶ ಜಾರಿಕಾರ ಹುದ್ದೆಗಳು

ಮಂಗಳೂರಿನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಅಧೀನ ನ್ಯಾಯಾಲಯಗಳಲ್ಲಿ ಖಾಲಿ ಇರುವ 26 ಆದೇಶ ಜಾರಿಕಾರ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ನಿಗದಿಪಡಿಸಿದ ದಿನಾಂಕದೊಳಗೆ ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರುವವರು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆ ದಿನಾಂಕದೊಳಗೆ ಅಭ್ಯರ್ಥಿಗಳು ಕನಿಷ್ಠ 18 ವರ್ಷ ಗರಿಷ್ಠ 35 ವಯೋಮಿತಿಯೊಳಗಿರಬೇಕು. ಎಸ್‌ಸಿ, ಎಸ್‌ಟಿ, ಹಾಗೂ ಪ್ರವರ್ಗ-1 ಅಭ್ಯರ್ಥಿಗಳಿಗೆ 5 ವರ್ಷ, ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ ವಯೋಮಿತಿ ಸಡಿಲಿಕೆ ಕಲ್ಪಿಸಲಾಗಿದೆ. ಲಘು ಅಥವಾ ಭಾರಿ ವಾಹನ ಚಾಲನಾ ಪರವಾನಗಿ ಹೊಂದಿರುವವರಿಗೆ ಆದ್ಯತೆ ನೀಡಲಾಗುತ್ತದೆ. ಆಸಕ್ತ ಅಭ್ಯರ್ಥಿಗಳು ಫೆಬ್ರವರಿ 28 ರೊಳಗೆ ಅರ್ಜಿ ಸಲ್ಲಿಸಬೇಕು. ಸಾಮಾನ್ಯ ಹಾಗೂ ಒಬಿಸಿ ಅಭ್ಯರ್ಥಿಗಳಿಗೆ ₹ 200 ಹಾಗೂ ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ ₹ 100 ಅರ್ಜಿ ಶುಲ್ಕ. ಆನ್‌ಲೈನ್ ಮೂಲಕ ಡೆಬಿಟ್ ಕಾರ್ಡ್ ಅಥವಾ ಕ್ರೆಡಿಟ್ ಕಾರ್ಡ್ ಮೂಲಕ ಶುಲ್ಕ ಪಾವತಿಸಬಹುದು. ಅಥವಾ ಚಲನ್ ಡೌನ್‌ಲೋಡ್ ಮಾಡಿಕೊಂಡು ಭಾರತೀಯ ಸ್ಟೇಟ್ ಬ್ಯಾಂಕ್‌ನ ಯಾವುದೇ ಶಾಖೆಯಲ್ಲಿ ಪಾವತಿಸಬಹುದು. ಅರ್ಜಿಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗೆ https://districts.ecourts.gov.in/dakshinakannada-onlinerecruitment ನೋಡಿ.

ಜಿಐಎಂಎಸ್‌ನಲ್ಲಿ ಬೋಧಕ ಹುದ್ದೆಗಳು

ಗುಲ್ಬರ್ಗ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನಲ್ಲಿ ಪ್ರೊಫೆಸರ್, ಅಸೋಸಿಯೇಟ್ ಪ್ರೊಫೆಸರ್ ಹಾಗೂ ಅಸಿಸ್ಟೆಂಟ್ ಪ್ರೊಫೆಸರ್‌ಗಳ ನೇಮಕಾತಿಗೆ ಫೆಬ್ರವರಿ 18 ರಂದು ನೇರ ಸಂದರ್ಶನ ಏರ್ಪಡಿಸಿದೆ. ಮೈಕ್ರೋಬಯಾಲಜಿ, ಜನರಲ್ ಸರ್ಜರಿ, ಜನರಲ್ ಮೆಡಿಸಿನ್, ಅನಸ್ತೇಷಿಯಾಲಜಿ, ಆರ್ಥೋಪೆಡಿಕ್ಸ್, ಓಪ್ತಾಲೋಮಾಲಜಿ, ಇಎನ್‌ಟಿ, ಟಿಬಿ ಆ್ಯಂಡ್ ಚೆಸ್ಟ್, ಪೆಡಿಯಾಟ್ರಿಕ್ಸ್, ಸೈಕಿಯಾಟ್ರಿ, ರೇಡಿಯಾಲಜಿ, ಕಮ್ಯುನಿಟಿ ಮೆಡಿಸಿನ್ ಮತ್ತು ಫಾರ್ಮಕೋಲಜಿ ವಿಭಾಗಗಳಲ್ಲಿ 13 ಹುದ್ದೆಗಳಿವೆ. ಅಭ್ಯರ್ಥಿಗಳು ಮೇಲ್ಕಂಡ ಹುದ್ದೆಗಳಿಗೆ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ನಿಗದಿಪಡಿಸಿರುವ ವಿದ್ಯಾರ್ಹತೆ ಮತ್ತು ಅನುಭವ ಹೊಂದಿರಬೇಕು. ಫೆಬ್ರವರಿ 18 ಬೆಳಗ್ಗೆ 9 ಗಂಟೆಗೆ ಸಂದರ್ಶನ ಆರಂಭವಾಗಲಿದೆ. ಅರ್ಹ ಅಭ್ಯರ್ಥಿಗಳು ಶೈಕ್ಷಣಿಕ ಮೂಲ ದಾಖಲೆಗಳು ಹಾಗೂ ಇತ್ತೀಚಿನ ಎರಡು ಪಾಸ್‌ಪೋರ್ಟ್ ಸೈಜ್ ಫೋಟೊಗಳೊಂದಿಗೆ ಸಂದರ್ಶನದಲ್ಲಿ ಪಾಲ್ಗೊಳ್ಳಬೇಕು. ಸಂದರ್ಶನ ನಡೆಯುವ ವಿಳಾಸ: ಡೈರೆಕ್ಟರ್ ಚೇಂಬರ್, ಗುಲ್ಬರ್ಗ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಕಲಬುರಗಿ. ಹೆಚ್ಚಿನ ಮಾಹಿತಿಗೆ https://bit.ly/2Bo9Ntq ನೋಡಿ.

ಸುದ್ದಿ ಸಾರ

■ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟೆಡ್ ಅಕೌಂಟ್ಸ್ ಆಫ್ ಇಂಡಿಯಾ (ಐಸಿಎಐ) 2018ರ ನವೆಂಬರ್‌ನಲ್ಲಿ ನಡೆಸಿದ ಸಿಎ ಐಪಿಸಿಸಿ ಪರೀಕ್ಷೆಯ ಫಲಿತಾಂಶ ಪ್ರಕಟಿಸಿದೆ. ಇದರ ಜತೆ ಆಲ್ ಇಂಡಿಯಾದ 50 ರ‍್ಯಾಂಕ್‌ಗಳನ್ನು ಪ್ರಕಟಿಸಿದೆ. ಅಭ್ಯರ್ಥಿಗಳು ಅಧಿಕೃತ ವೆಬ್‌ಸೈಟ್ icaiexam.icai.org ನಲ್ಲಿ ಫಲಿತಾಂಶ ಪರಿಶೀಲಿಸಿಕೊಳ್ಳಬಹುದು. ಅಭ್ಯರ್ಥಿಗಳು ಎಸ್‌ಎಂಎಸ್ ಮೂಲಕ ಬೇಕಿದ್ದರೂ ಫಲಿತಾಂಶಕ್ಕೆ ಪಡೆಯಬಹುದು. ಇಂಟರ್‌ಮೀಡಿಯೇಟ್ (ಐಪಿಸಿ) ಪರೀಕ್ಷೆಯಲ್ಲಿ ನವದೆಹಲಿಯ ಅರ್ಜುನ್ ಮಿನೊಚ ಮೊದಲ, ಚಂಡೀಘರ್‌ನ ದಿವ್ಯಾ ಗುಪ್ತಾ ದ್ವಿತೀಯ ಮತ್ತು ನವದೆಹಲಿಯ ಪ್ರಮಂಶು ಶರ್ಮ ತೃತೀಯ ರ‍್ಯಾಂಕ್ ಪಡೆದಿದ್ದಾರೆ. ಸಿಎ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ನವದೆಹಲಿಯ ಶುಭಂ ಮಲ್ಹೋತ್ರ-ಪ್ರಥಮ, ಸಿರ್ಸಾದ ಪ್ರನ್ಷು ಬಗ್ರೊಡಿಯಾ ಮತ್ತು ಪುಷ್ಪಾ ಗೋಯಲ್-ದ್ವಿತೀಯ, ಕೋಲ್ಕತ್ತಾದ ದೇವೇಶ್ ಲಖೋಟಿಯಾ-ತೃತೀಯ ಸ್ಥಾನ ಪಡೆದಿದ್ದಾರೆ.

■ ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ (ಐಜಿಎನ್‌ಒಯು) ಡಿಸೆಂಬರ್‌ನಲ್ಲಿ ನಡೆಸಿದ ಟರ್ಮ್-ಎಂಡ್ ಎಕ್ಸಾಮಿನೇಷನ್ (ಟಿಇಇ)ನ ಫಲಿತಾಂಶವನ್ನು ಫೆಬ್ರವರಿ 15ರಂದು ಪ್ರಕಟಿಸಲಿದೆ. ಪರೀಕ್ಷೆಗೆ ಅರ್ಜಿ ಸಲ್ಲಿಸುವಾಗಲೇ ಮುಂಚಿತ ಫಲಿತಾಂಶಕ್ಕೆ ಅರ್ಜಿ ಸಲ್ಲಿಸಿದವರ ಫಲಿತಾಂಶವನ್ನು ಈ ಮೊದಲು ಬಿಡುಗಡೆ ಮಾಡಿತ್ತು. ಅಭ್ಯರ್ಥಿಗಳು ಅಧಿಕೃತ ವೆಬ್‌ಸೈಟ್ ignou.ac.in ನಲ್ಲಿ ಫಲಿತಾಂಶ ನೋಡಬಹುದು.

ದೂರಶಿಕ್ಷಣದ ಮೂಲಕ ಐಟಿಐ ಮಾಡಬಹುದೇ?

EDUCARE

ನಾನು ವಾಯುಪಡೆಯ ವೈ ಗ್ರೂಪ್ ಹುದ್ದೆಗೆ ಅರ್ಜಿ ಸಲ್ಲಿಸಿದ್ದೇನೆ. ಇದಕ್ಕೆ ಯಾವ ಪುಸ್ತಕ ಓದಲಿ.

| ವಿಶಾಲ್ ಪತ್ತಾರ್

ವಾಯುಪಡೆಯ ವೈ ಗ್ರೂಪ್ ಹುದ್ದೆಗೆ ಇಂಗ್ಲಿಷ್, ರೀಸನಿಂಗ್ ಜನರಲ್ ಅವೇರ್‌ನೆಸ್ ಪಠ್ಯಕ್ರಮವನ್ನು ನಿಗದಿಪಡಿಸಿದ್ದಾರೆ. ಅರಿಹಂತ್, ದಿಶಾ, ಉಪಕಾರ್ ಮೊದಲಾದ ಪ್ರಕಾಶನ ಸಂಸ್ಥೆಗಳು ಹೊರತಂದಿರುವ ಪುಸ್ತಕಗಳನ್ನು ಅಭ್ಯಾಸ ಮಾಡಬಹುದು.

ನಾನು ಬಿಎಸ್ಸಿ ಎರಡನೇ ವರ್ಷದಲ್ಲಿ ಓದುತ್ತಿದ್ದು, ಈಗ ಐಟಿಐ ಇಲೆಕ್ಟ್ರಾನಿಕ್ಸ್ ಅನ್ನು ದೂರಶಿಕ್ಷಣದ ಮೂಲಕ ಮಾಡಬಹುದಾ?

| ಶರಣಬಸವ ಮಡಗಂಟನಾಳ, ಹನುಮನಗುಡ್ಡ

ಐಟಿಐ ಅನ್ನು ದೂರಶಿಕ್ಷಣದ ಮೂಲಕ ಮಾಡುವುದಕ್ಕೆ ಅವಕಾಶವಿದೆ. ಆದರೆ ಅದೊಂದು ಪ್ರಾಯೋಗಿಕ ವಿಷಯವಾಗಿರುವುದರಿಂದ ರೆಗ್ಯುಲರ್ ಆಗಿ ಮಾಡುವುದೇ ಹೆಚ್ಚು ಪ್ರಯೋಜನಕಾರಿ.

ನಾನು ಕುವೆಂಪು ವಿಶ್ವವಿದ್ಯಾಲಯದಿಂದ ದೂರಶಿಕ್ಷಣದ ಮೂಲಕ ಎಂಎ ಇತಿಹಾಸ ಮಾಡಿದ್ದೇನೆ. ಸಿಡಿಪಿಒ ಹುದ್ದೆಗಾಗಿ ಸಮಾಜಶಾಸ್ತ್ರದ ಎಂಎ ಅನ್ನು ಕುವೆಂಪು ವಿವಿ ಮೂಲಕವೇ ಮಾಡಬಯಸಿದ್ದೇನೆ. ಆದರೆ ನಾನು ಪದವಿಯಲ್ಲಿ ಸಮಾಜಶಾಸ್ತ್ರವನ್ನು ಒಂದು ವಿಷಯವಾಗಿ ಓದಿಲ್ಲ. ಇದರ ಹೊರತಾಗಿಯೂ ನಾನು ಆ ವಿಷಯದಲ್ಲಿ ಎಂಎ ಮಾಡಲು ಅವಕಾಶವಿದೆಯೇ?

| ಚೇತನ ಬೆಳಗಾವಿ

ಸಮಾಜಶಾಸ್ತ್ರವನ್ನು ಪದವಿಯಲ್ಲಿ ಐಚ್ಛಿಕ ವಿಷಯವಾಗಿ ಓದಿರದಿದ್ದರೂ ಕುವೆಂಪು ವಿಶ್ವವಿದ್ಯಾನಿಲಯದ ದೂರಶಿಕ್ಷಣ ವಿಭಾಗದಲ್ಲಿ ಎಂ.ಎ. ಸಮಾಜಶಾಸ್ತ್ರ ಓದಬಹುದು. ಯಾವುದೇ ಪದವಿ ಓದಿದ್ದರೂ ಎಂ.ಎ. ಸಮಾಜಶಾಸ್ತ್ರ ಓದಲು ಅಲ್ಲಿ ಅವಕಾಶ ಇದೆ. . http://www.kuvempuuniversitydde.org ಜಾಲತಾಣವನ್ನು ಗಮನಿಸಿ.

ನಾನು ಕೆಎಸ್‌ಆರ್‌ಪಿ ಕಾನ್‌ಸ್ಟೆಬಲ್ ಹುದ್ದೆಗೆ ಅರ್ಜಿ ಸಲ್ಲಿಸಿದ್ದು, ಅದರಲ್ಲಿ ಶಿಕ್ಷಣಕ್ಕಾಗಿ ತೆಗೆಸಿದ ಇನ್‌ಕಂ ಸರ್ಟಿಫಿಕೇಟ್‌ನ ದಿನಾಂಕವನ್ನು ನಮೂದಿಸಿದ್ದೇನೆ. ದಾಖಲೆ ಪರಿಶೀಲನೆ ಸಮಯದಲ್ಲಿ ಇದರಿಂದ ಏನಾದರೂ ಸಮಸ್ಯೆಯಾಗಬಹುದೇ?

| ವಿಜಯಕುಮಾರ್ ತಲ್ವಾರ್

ಒಮ್ಮೆ ತೆಗೆಸಿದ ಆದಾಯ ಪ್ರಮಾಣಪತ್ರ ಮುಂದಿನ ಐದು ವರ್ಷಗಳವರೆಗೆ ಚಾಲ್ತಿಯಲ್ಲಿರುತ್ತದೆ. ನಿಮ್ಮ ಆದಾಯ ಪ್ರಮಾಣಪತ್ರಕ್ಕೆ ಐದು ವರ್ಷದ ಅವಧಿ ಮೀರಿಲ್ಲವಾದರೆ ನೀವು ದಿನಾಂಕ ನಮೂದಿಸಿರುವುದರಿಂದ ಏನೂ ತೊಂದರೆಯಾಗದು.

ಪತ್ರ ಬರೆಯಿರಿ... ವಿಜಯವಾಣಿ
ವಿದ್ಯಾರ್ಥಿ-ಉದ್ಯೋಗ ಮಿತ್ರ, ಎಜುಕೇರ್
ವಿಆರ್‌ಎಲ್ ಮೀಡಿಯಾ ಲಿ. ನಂ. 24,
ಶ್ರೀ ಸಾಯಿರಾಂ ಟವರ್ಸ್, ಮೊದಲ ಮಹಡಿ,
5ನೇ ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18.
Email: studentmitra12@gmail.com

Scanned by CamScanner

ವಿಜಯವಾಣಿ ಸಹಯೋಗದಲ್ಲಿ Buddy4Study.com ಅಂತಾರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ವಿದ್ಯಾರ್ಥಿವೇತನ ಹಾಗೂ ಪ್ರೋತ್ಸಾಹಕ ಯೋಜನೆಗಳ ಮಾಹಿತಿಯನ್ನು ನೀಡುತ್ತದೆ. ಈ ಮಾಹಿತಿಯನ್ನು ವಿದ್ಯಾರ್ಥಿ-ಉದ್ಯೋಗ ಮಿತ್ರ ಎಂದಿನಂತೆ ಹೊತ್ತು ತರಲಿದ್ದಾನೆ.

ಎಐಎಸ್‌ಟಿಇ ಸ್ಕಾಲರ್‌ಷಿಪ್

ಆಲ್ ಇಂಡಿಯಾ ಸ್ಕಾಲರ್‌ಷಿಪ್ ಟೆಸ್ಟ್ ಎಕ್ಸಾಮ್ (ಎಐಎಸ್‌ಟಿಇ) 2019ಕ್ಕೆ ಹಾಜರಾದ ರಾಷ್ಟ್ರಾದ್ಯಂತ ವಿದ್ಯಾರ್ಥಿಗಳಿಂದ ಎಐಟಿಟಿ ಎಜುಕೇಷನ್ ಟ್ರಸ್ಟ್ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಿದೆ. ರಾಷ್ಟ್ರೀಯ ಮಟ್ಟದ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಮೆರಿಟ್ ಮತ್ತು ಆರ್ಥಿಕ ಪರಿಸ್ಥಿತಿ ಆಧಾರದ ಮೇಲೆ ವಿದ್ಯಾರ್ಥಿವೇತನ ನೀಡಲಾಗುವುದು.

ವರ್ಗ: ಪ್ರತಿಭೆ ಆಧಾರಿತ. **ಯೋಜನೆ:** ಆಲ್ ಇಂಡಿಯಾ ಸ್ಕಾಲರ್‌ಷಿಪ್ ಟೆಸ್ಟ್ ಎಕ್ಸಾಮ್ (ಎಐಎಸ್‌ಟಿಇ) 2019.

ಅರ್ಹತೆ: ಯಾವುದೇ ರಾಜ್ಯದ ಮಾನ್ಯತೆ ಪಡೆದ ಯಾವುದೇ ಶಾಲೆ/ ಇನ್‌ಸ್ಟಿಟ್ಯೂಟ್‌ನ 4 ರಿಂದ 12ನೇ ತರಗತಿಯ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. **ಬಹುಮಾನ:** ಎಐಎಸ್‌ಟಿಇಯ ರಾಷ್ಟ್ರೀಯ ಮಟ್ಟದ ರ‍್ಯಾಂಕ್ ಪಡೆದವರಿಗೆ ವಿದ್ಯಾರ್ಥಿವೇತನ ₹90,000, ರಾಜ್ಯ ಮಟ್ಟದ ರ‍್ಯಾಂಕರ್ಸ್‌ಗೆ ₹30,000 ಮತ್ತು ಉಳಿದ 200 ವಿದ್ಯಾರ್ಥಿಗಳಿಗೆ ₹5000 ವಿದ್ಯಾರ್ಥಿವೇತನ ನೀಡಲಾಗುವುದು. ಅಲ್ಲದೇ ಇತರ ರಾಜ್ಯದ ವಿದ್ಯಾರ್ಥಿಗಳಿಗೆ ಪುಸ್ತಕ-ಸ್ಟೇಷನರಿ ವೆಚ್ಚ ಹಾಗೂ ಲಾಭ ಪಡೆಯ ಬಹುದು.

ಕಡೆದಿನ: ಫೆಬ್ರವರಿ 20. **ಅರ್ಜಿ ಸಲ್ಲಿಸುವ ಯುಆರ್‌ಎಲ್್:** http://www.b4s.in/Vijaya/AIS19

ಸರಳಾ ದೇವಿ ವಿದ್ಯಾರ್ಥಿವೇತನ

ಪ್ರಸ್ತುತ ದೆಹಲಿ/ಎನ್‌ಸಿಆರ್ ರೀಜನ್‌ನಲ್ಲಿ ಶಿಕ್ಷಣ ಪಡೆಯುತ್ತಿರುವ ಪ್ರತಿಭಾವಂತ ಮತ್ತು ಆರ್ಥಿಕವಾಗಿ ಕಷ್ಟದಲ್ಲಿರುವ ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕಾಗಿ ಧರ್ಮಪಾಲ್ ಸತ್ಯಪಾಲ್ ಚಾರಿಟಬಲ್ ಟ್ರಸ್ಟ್ ವಿದ್ಯಾರ್ಥಿವೇತನ ನೀಡುತ್ತಿದೆ. **ವರ್ಗ:** ಮೆರಿಟ್ ಮತ್ತು ಆರ್ಥಿಕ ಪರಿಸ್ಥಿತಿ ಆಧಾರಿತ. **ಯೋಜನೆ:** ಸರಳಾ ದೇವಿ ಸ್ಕಾಲರ್‌ಷಿಪ್ 2019. **ಅರ್ಹತೆ:** ಪ್ರಸ್ತುತ ಮೊದಲ ವರ್ಷದ ಎಂಬಿಬಿಎಸ್, ಇಂಜಿನಿಯರಿಂಗ್, ನರ್ಸಿಂಗ್ ಎಲ್‌ಎಲ್‌ಬಿ, ಸೈಕಾಲಜಿ ಅಥವಾ ಮಾಸ್ ಕಮ್ಯುನಿಕೇಷನ್ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು 12ನೇ ತರಗತಿಯಲ್ಲಿ ಶೇ.75 ಅಂಕ ಗಳಿಸಿರಬೇಕು. ಸಿಎ, ಸಿಎಸ್ ಅಧ್ಯಯನ ಮಾಡ ಬಯಸುವ ವಿದ್ಯಾರ್ಥಿಗಳು 12ನೇ ತರಗತಿಯಲ್ಲಿ ಶೇ.80 ಅಂಕ ಗಳಿಸಿರಬೇಕು. ವೈಕೇಷನಲ್ ಕೋರ್ಸ್ ಮಾಡಲು ಇಚ್ಛಿಸುವ ಅನುತ್ತೀರ್ಣರಾದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ₹ 4.5 ಲಕ್ಷಕ್ಕಿಂತ ಹೆಚ್ಚಿರಬಾರದು. **ಬಹುಮಾನ:** ವಿಜ್ಞಾನ ಮತ್ತು ಇಂಜಿನಿಯರಿಂಗ್ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ₹ 75,000, ಕಲಾ ವಿದ್ಯಾರ್ಥಿಗಳಿಗೆ ₹ 20,000, ವಾಣಿಜ್ಯ ಮತ್ತು ಸಿಎ, ಸಿಎಸ್‌ನಲ್ಲಿ ಮೊದಲ ವರ್ಷದ ಅಧ್ಯಯನ ಮುಗಿಸಿರುವ ವಿದ್ಯಾರ್ಥಿಗಳಿಗೆ ₹ 25,000 ಮತ್ತು ವೃತ್ತಿ ಶಿಕ್ಷಣ ಅಧ್ಯಯನ ಮಾಡುವವರಿಗೆ ₹ 15,000 ನೀಡಲಾಗುವುದು.

ಕಡೆದಿನ: ಮಾರ್ಚ್ 31. **ಅರ್ಜಿ ಸಲ್ಲಿಸುವ ಯುಆರ್‌ಎಲ್್:** http://www.b4s.in/vijaya/SDS5

ಗಂಗಾ ನದಿಗೆ ಆರ್‌ಐಎಸ್

ಪ್ರಚಲಿತ

ಗಂಗಾ ನದಿಯಲ್ಲಿ ಸರಕು ಸಾಗಾಣಿಕೆ ಹೆಚ್ಚಿಸುವ ನಲುವಾಗಿ ಎರಡನೇ ಹಂತದ ರಿವರ್ ಇನ್ಫರ್ಮೇಷನ್ ಸಿಸ್ಟಮ್ (ಆರ್‌ಐಎಸ್)ಅನ್ನು ಇತ್ತೀಚೆಗಷ್ಟೆ ಫರಕ್ಕ ಮತ್ತು ಪಟನಾದಲ್ಲಿ ಉದ್ಘಾಟಿಸಲಾಯಿತು.

ಆರ್‌ಐಎಸ್ ಎಂದರೇನು?: ಜಲಯಾನದ ಸಂಚಾರದಲ್ಲಿ ವಾಹನ ದಟ್ಟಣೆ ಮತ್ತು ಸಾರಿಗೆ ಪ್ರಕ್ರಿಯೆಯನ್ನು ಉತ್ತಮಗೊಳಿಸಲು ವಿನ್ಯಾಸಗೊಳಿಸಲಾದ ಆಧುನಿಕ ಟ್ರ್ಯಾಕಿಂಗ್ ಹೊಂದಿರುವ ಹಾರ್ಡ್‌ವೇರ್ ಮತ್ತು ಸಾಫ್ಟ್ ವೇರ್ ಉಪಕರಣ. ಶಿಪ್ಪಿಂಗ್ ಸಚಿವಾಲಯದ ಅಡಿಯಲ್ಲಿ ಭಾರತೀಯ ಒಳನಾಡು ಜಲಮಾರ್ಗ ಪ್ರಾಧಿಕಾರದ ಜವಾಬ್ದಾರಿಯಲ್ಲಿ ಆರ್‌ಐಎಸ್‌ಅನ್ನು ಜಾರಿಗೊಳಿಸಲಾಗುತ್ತದೆ.

ಆರ್‌ಐಎಸ್ ಉಪಯೋಗಗಳು

■ಹಡಗು ಮತ್ತು ತೀರದಲ್ಲಿರುವ ಸ್ಟೇಷನ್‌ಗಳ (ಬೇಸ್ ಸ್ಟೇಷನ್ಸ್)ಗಳ ನಡುವೆ ಮಾಹಿತಿಯನ್ನು ಸರಿಯಾದ ಸಮಯದಲ್ಲಿ ಸ್ವಿಫ್ಟ್ ಎಲೆಕ್ಟಾನಿಕ್ ಡೇಟಾ ವರ್ಗಾವಣೆ ಮಾಡುತ್ತದೆ. ■ಬಂದರು ಮತ್ತು ನದಿಗಳ ಒಳನಾಡಿನ ಸಂಚಾರ ಸುರಕ್ಷತೆ ಹೆಚ್ಚಳ. ■ಜಲಯಾನದ ಜಲಮಾರ್ಗದ ಉತ್ತಮ ಬಳಕೆ. ■ಪರಿಸರ ಸಂರಕ್ಷಣೆ

ಸಿಬಿಎಸ್‌ಇ 9ನೇ ತರಗತಿ ಪಾಠಗಳು

History: The French Society during the Late 18th Century

THE OUTBREAK OF THE REVOLUTION

He executed all the so-called 'enemies' of the republic.

1795 – Jacobin Republic overthrown, a Directory rules France. A new Convention appointed a fiveman Directorate to run the state from 26 October 1795.

1799 – The Revolution ends with the rise of Napoleon Bonaparte.

Time Line : The French Revolution

1770s-1780s — Economic decline: French Government in deep debt.

1788-1789 — Bad harvest, high prices, food riots 1789, May 5 — Estates-General convened, demands reforms.

1789, July 14 — National Assembly formed. Bastille stormed on July 14. French Revolution starts.

1789, Aug. 4 — Night of August 4 ends the rights of the aristocracy.

1789, Aug. 26 — Declaration of the Rights ofMan

1790 — Civil Constitution of the Clergy nationalizes the Church.

1792 — Constitution of 1791 converts absolute History: The French Society during the Late 18th Century monarchy into a constitutional monarchy with limited powers.

1792 — Austria and Prussia attack revolutionary France

1793 — Louis XVI and Marie Antoinette are executed.

1792-1794 — The Reign of Terror starts. Austria, Britain, the Netherlands, Prussia and Spain are at war with France.

— Robespierre's Committee of Public Safety repels back foreign invaders.

Executes many "enemies of the people" in France itself.

1794 — Robespierre is executed. France is governed by a Directory, a committee of five men.

1799 — Napoleon Bonaparte becomes the leader.

WOMEN'S REVOLUTION

From the very beginning, women were active participants in the events which brought about so many changes in the French society.

Most women of the third estate had to work for a living.Their wages were lower than those of men.

In order to discuss and voice their interests, women started their own political clubs and newspapers.

One of their main demands was that women must enjoy the same political rights as men. Some laws were introduced to improve the position of women. Their struggle still continues in several parts of the world. It was finally in 1946 that women in France won the right to vote.

Contd

AKSHARA INTERNATIONAL PUBLIC SCHOOL

Kowdle, Maddur Tq. Mandya Dist. Ph.: 9964807951 email:aksharaipskowdle@gmail.com

II PUC SYLLABUS GURUKUL IND PU COLLEGE

ACCOUNTANCY

Question Paper Solution

Solution to Accountancy Preparatory Examination paper of KSPUCPA 2019

Solution;

In the books of Surya Limited
BALANCE SHEET AS ON 31.03.2018

Sl. No	Particulars	Note	Amount
I	**Equity & Liabilities**	-	
1	Shareholders' Funds		
	Share Capital	1	22,00,000
	Reserves & Surplus		600,000
2	Non-Current Liabilities		
	Long term debts		1,200,000
3	Current Liabilities		
	Trade Payables		3,50,000
	Short term provisions		2,50,000
	Total Equity & Liabilities		**46,00,000**
II	**Assets**		
1	Non-Current Assets		
a)	Fixed Assets		
	i) Tangible Assets	2	3,400,000
1	Current Assets		
	Inventories		7,00,000
	Cash & Cash Equivalents		5,00,000
	Total Assets		**46,00,000**

Note No 1 : Share Capital

Particulars		Amount
Equity share capital	-	16,00,000
Preference share capital	-	6,00,000
Total		**22,00,000**

Note No 2 : Tangible Assets

Particulars		Amount
Land & Buildings	-	26,00,000
Plant & Machinery	-	8,00,000
Total		**34,00,000**

24. Calculate current and quick ration from the following;

Inventories	25,000
Debtors	20,000
Bills Receivable	5,000
Advance Tax	12,000
Cash	18,000
Creditors	30,000
Bills Payable	20,000
Bank Overdraft	10,000

Solution;

Current Ratio = Current Assets / Current Liabilities = 80,000 / 60,000 = 1.33 : 1

Quick Ratio = Quick Assets / Current Liabilities = 43,000 / 60,000 = 0.72 : 1

Current Assets = Inventories + Debtors + Bills Receivable + Advance Tax + Cash
= 25,000 + 20,000 + 5,000 + 12,000 + 18,000 = **Rs.80,000**

Current Liabilities = Creditors + Bills Payable + Bank Overdraft
= 30,000 + 20,000 + 10,000 = **Rs.60,000**

Quick Assets = Current Assets – Stock – Prepaid Expenses.
= 80,000 – 25,000 – 12,000 = Rs.43,000

Scanned by CamScanner

II PUC SYLLABUS — EXCELLENT PU SCIENCE COLLEGE — K.S.R.T.C Colony, Athani Road, Vijayapur. Ph: 08352-270401, 271401 email: excellentcollege2015@gmail.com

CHEMISTRY

10. HALOALKANES AND HALOARENES

Two or Three mark questions :

12) Explain SN^1 mechanism with an example (or) What happens when t-butyl bromide is treated with aqueous alkali solution and explain mechanism of the reaction.

A) Ex : Tertiary butyl bromide undergoes hydrolysis with aqueous NaOH to form tert-butyl alcohol by SN^1 mechanism and follows first order kinetics. This mechanism involves two steps.



t - Butyl bromide → t - Butyl alcohol

Step 1 : The *t*-butyl bromide undergoes slow ionization to form a carbocation and tertiary bromide ion (The carbocation is planar and the positive) charged carbon atom is sp^2 hybridised) Step 1 is the slowest and reversible.



Carbocation

Step 2 : The nucleophile OH- attacks on either side of carbocation to form *t*-butyl alcohol.



t-Butyl alcohol

Note : In this type of reaction, the rate of the reaction depends only on the concentration of haloalkanes and is independent of the concentration of the nucleophile. Hence, the rate equation is given by, **Rate = $k[RX]$**

Generally, tertiary alkyl halides react by SN^1 mechanism.

13) Explain SN^2 mechanism with an example. (or) What happens when methyl bromide is treated with aqueous alkali solution and explain the mechanism of the reaction.

A) Ex : Methyl bromide undergoes hydrolysis with aqueous NaOH to form methyl alcohol by SN^2 mechanism and follows second order kinetic. This mechanism involves only one step.



Methyl bromide — Transition state — Methyl alcohol

The nucleophile OH - attacks from the rear side of the leaving group to give transition state in which C - OH bond is partially formed and C - Br bond is partially broken. This stabilizes with the loss of Br - ion to give methyl alcohol. This process is called as inversion of configuration.

Note : In this type of reaction the rate of the reaction depends on the concentration of haloalkane as well as nucleophile. Hence, the rate equation is given by.

Rate = k[RX] [OH⁻]

Generally, primary alkyl halides react by SN^2 mechanism.

14) Give the order of reactivity of alkyl halides towards SN^1 and SN^2 reactions.

A) For SN^1 : $3^o > 2^o > 1^o$ alkyl halides > methyl halides

For SN^2 : methyl halides > $1^o > 2^o > 3^o$ alkyl halides

15) Why allylic and Benzylic halides shows high reactivity towards the SN^1 reaction

A) The carbocation thus formed gets stabilished through resonance. Hence they are very reactive towards SN^1 reaction.

16) Give any four differences between SN^1 and SN^2 mechanisms.

A)

SN^1 REACTION	SN^2 REACTION
1. It is a two step reaction	1. It is a single step reaction
2. Rate of the reaction depends upon only the concentration of halo-alkanes	2. Rate of the reaction depends upon the concentration of haloalkane and nucleophile
3. It follows first order kinetics	3. It follows second order kinetics
4. The order of reactivity is $3^o > 2^o > 1^o$ - CH_3	4. The order of reactivity is $-CH_3 > 1^o > 2^o > 3^o$
5. Reaction is favoured by polar solvents	5. Reaction is favoured by non-polar solvents
6. Reactions takes place with weak bases	6. Reaction requires strong base
7. Racemic mixture is obtained as the product	7. The product have inversion of configuration

17) What is nitration of chlorobenzene? Give equation

A) Chlorobenzene is treated with conc : HNO_3 in the presence of conc : H_2SO_4 gives ortho and para-chloro nitrobenzene



p - chloro nitrobenzene — o - chloro nitrobenzene

****@@@@****

II PUC MODEL QUESTION PAPER — EXCELLENT PU SCIENCE COLLEGE — K.S.R.T.C Colony, Athani Road, Vijayapur. Ph: 08352-270401, 271401 email: excellentcollege2015@gmail.com

MATHEMATICS

35) Find a unit vector perpendicular to each of the vectors $\vec{a}+\vec{b}$ and $\vec{a}-\vec{b}$ where $\vec{a} = 3i + 2j + 2k$ and $\vec{b} = i + 2j - 2k$.

A) Let $\vec{c}$ be a vector perpendicular to $(\vec{a}+\vec{b})\times(\vec{a}-\vec{b})$.

Then $\vec{c}=(\vec{a}+\vec{b})\times(\vec{a}-\vec{b})=2\vec{b}\times\vec{a}$

$$\begin{vmatrix} i & j & k \\ 1 & 2 & -2 \\ 3 & 2 & 2 \end{vmatrix} = i(4+4) - j(2+6) + k(2-6)$$

$= 8i - 8j - 4k = 4(2i - 2j - k)$

Let $\vec{c}$ be a unit vector perpendicular to $(\vec{a}+\vec{b})$ and $\vec{a}-\vec{b}$.

Then $\vec{c}=\dfrac{\vec{c}}{|\vec{c}|}=\dfrac{4(2i-2j-k)}{4\times3}=\dfrac{2i-2j-k}{3}$

36) Find the area of triangle with vertices A(1, 1, 2), B(2, 3, 5), C(1, 5, 5).

A) $A \equiv (1, 1, 2) \Rightarrow \overline{OA} = i + j + 2k$

$B \equiv (2, 3, 5) \Rightarrow \overline{OB} = 2i + 3j + 5k$ and

$C \equiv (1, 5, 5) \Rightarrow \overline{OC} = i + 5j + 5k$

Now $\overline{AB} \equiv \overline{OB} - \overline{OA} = 2i + 3j + 5k - i - j - 2k = i + 2j + 3k$ and $\overline{AC} = \overline{OC} - \overline{OA}$

$= i + 5j + 5k - i - j - 2k = 4j + 3k$

Now $\overline{AB} \times \overline{AC} = \begin{vmatrix} i & j & k \\ 1 & 2 & 3 \\ 0 & 4 & 3 \end{vmatrix}$

$= i(6 - 12) - j(3 - 0) + k(4 - 0) = -6i - 3j + 4k$

Then $|\overline{AB} \times \overline{AC}| = \sqrt{(-6)^2 + (-3)^2 + 4^2}$

$= \sqrt{36 + 9 + 16} = \sqrt{61}$

Area of triangle ABC $= \frac{1}{2}|\overline{AB} \times \overline{AC}| = \frac{\sqrt{61}}{2}$ sq. units.

37) Find the equation of the plane through the intersection of the planes 3x - y + 2z - 4 = 0 and x + y + x - 2 = 0 and the point (2, 2, 1).

A) The equation of any plane through the intersection of the given plane is $(3x - y + 2z - 4) + \alpha(x + y + z - 2) = 0$, where $\alpha \in R$ ...(1)

The plane passes through the point (2, 2, 1).

$\Rightarrow (3 \times 2 - 2 + 2 \times 1 - 4) + \alpha(2 + 2 + 1 - 2) = 0 \Rightarrow 2 + 3\alpha = 0 \Rightarrow \alpha = -\frac{2}{3}$.

Substituting $\alpha = -\frac{2}{3}$ in equation (1), we obtain

$(3x - y + 2z - 4) - \frac{2}{3}(x + y + z - 2) = 0$

$\Rightarrow 7x - 5y + 4z - 8 = 0.$

This is the required equation of the plane.

38) A bag contains 4 red and 4 black balls, another bag contains 2 red and 6 black balls. One of the two bags is selected at random and a ball is drawn from the bag which is found to be red. Find the probability that the ball is drawn from the first bag.

A) Let E_1 and E_2 be the events of selecting first bag and second bag respectively:

Then $P(E_1) = P(E_2) = \frac{1}{2}$

Let A be the event of getting a red ball.

$\Rightarrow P(A \mid E_1)$ = P (drawing a red ball from first bag) $= \frac{4}{8} = \frac{1}{2}$ and $P(A \mid E_2)$

= P(drawing a red ball from second bag) = $\frac{2}{8} = \frac{1}{4}$. The probability of drawing a ball from the first bag, given that it is red, is given by $P(E_1/A)$. Using Bayes' theorem, we obtain $P(E_1/A)$

$$= \frac{P(E_1)P(A|E_1)}{P(E_1)P(A|E_1)+P(E_2)P(A|E_2)} = \frac{\frac{1}{2}\cdot\frac{1}{2}}{\frac{1}{2}\cdot\frac{1}{2}+\frac{1}{2}\cdot\frac{1}{4}} = \frac{\frac{1}{4}}{\frac{1}{4}+\frac{1}{8}} = \frac{\frac{1}{4}}{\frac{3}{8}} = \frac{2}{3}$$

39) Consider $f: R^+ \to [-5, \infty)$ defined by $f(x) = 9x^2 + 6x - 5$. Show that f is invertible with $f^{-1}(y) = \dfrac{-1+\sqrt{y+6}}{3}$.

A) We have $f: R^+ \to [-5, \infty)$ defined by $f(x) = 9x^2 + 6x - 5$

Let $a_1, a_2 \in R^+$. Now $f(a_1) = f(a_2)$

$\Rightarrow 9a_1^2 + 6a_1 - 5 = 9a_2^2 + 6a_2 - 5$

$\Rightarrow 9a_1^2 - 9a_2^2 + 6a_1 - 6a_2 = 0$

$\Rightarrow 9(a_1 - a_2)(a_1 + a_2) + 6(a_1 - a_2) = 0$

$\Rightarrow (a_1 - a_2)[9a_1 + 9a_2 + 6] = 0, \Rightarrow a_1 - a_2 = 0 \left(\because 9a_1 + 9a_2 + 6 \neq 0 \text{ as } a_1, a_2 \in R^+\right)$

$\Rightarrow a_1 = a_2$. Thus f is one-one.

Let $y \in (-5, \infty)$. Write $y = 9x^2 + 6x - 5$.

Then $9x^2 + 6x - 5 - y = 0$

$\Rightarrow x = \dfrac{-6 \pm \sqrt{36 + 36(y+5)}}{18} = \dfrac{-1 \pm \sqrt{y+6}}{3}$

$\therefore x = \dfrac{-1+\sqrt{y+6}}{3} \in R^+$ as $\dfrac{-1-\sqrt{y+6}}{3} \notin R^+$

is neglected. Thus $f^{-1}(y) = \dfrac{-1+\sqrt{y+6}}{3}$.

For every element, $y \in B$ there exists a pre-image x in $[-5, \infty)$ such that $f(x) = y$. So f is onto. Thus f is one-one and onto and therefore invertible. Hence inverse function of f is given by $f^{-1}(y) = \dfrac{-1+\sqrt{y+6}}{3}$.

Continued...

Scanned by CamScanner

ವಿಜಯವಾಣಿ
ಭಾನುವಾರ | 10 ಫೆಬ್ರವರಿ 2019

ಪಂಚಾಂಗ

ವಿಲಂಬ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮೀ (ಬೆ. 10.04), ನಕ್ಷತ್ರ: ರೇವತಿ (ಅ. 03.59), ಸೌರ ಮಾಸ: ಮಕರ 27, ಹಿಜರಿ: ಜುಮಾದ ಅಲ್-ಅಖಿರ್ 04, ಮಳೆನಕ್ಷತ್ರ: ಧನಿಷ್ಠಾ ಒಂದನೆಯ ಪಾದ. ರಾಹುಕಾಲ: ಮ. 04.30-06.00, ಯಮಗಂಡಕಾಲ: ಮ. 12.00-01.30. ಸೂರ್ಯೋದಯ: 06.46, ಸೂರ್ಯಾಸ್ತ: 06.19 (ಸೋಮವಾರದ ಸೂರ್ಯೋದಯ: 06.46, ಸೂರ್ಯಾಸ್ತ: 06.19)

ಅಂದು ಈ ದಿನ...

- **1846:** ಮೊದಲ ಆಂಗ್ಲೋ-ಸಿಖ್ ಯುದ್ಧದಲ್ಲಿ ಸಿಖ್ಖರ ಪರಾಜಯ
- **1921:** ನವದೆಹಲಿಯ ಇಂಡಿಯಾ ಗೇಟ್ ಶಂಕುಸ್ಥಾಪನೆ
- **1952:** ಇಂಗ್ಲೆಂಡನ್ನು ಸೋಲಿಸಿ ಮೊಟ್ಟಮೊದಲ ಟೆಸ್ಟ್ ಪಂದ್ಯ ಗೆದ್ದ ಭಾರತ
- **1996:** ಚೆಸ್ ಪಂದ್ಯದಲ್ಲಿ ಐ.ಬಿ.ಎಂ ಸೂಪರ್ ಕಂಪ್ಯೂಟರ್ ಎದುರು ಗ್ಯಾರಿ ಕಾಸ್ಪರೋವ್‌ಗೆ ಸೋಲು

ರೇಬಿಸ್‌ಗೆ ಮೊದಲು ವ್ಯಾಕ್ಸಿನೇಷನ್ ಪಡೆದವರು ಜೋಸೆಫ್



ಸ್ಪರ್ಧಾ ವಿಜ್ಞಾನ

ರೇಬಿಸ್‌ಗೆ ಮೊದಲ ಬಾರಿಗೆ ಲಸಿಕೆ ಕಂಡುಹಿಡಿದಿದ್ದು ಯಾರು ಎಂದರೆ ಎಲ್ಲರು ಒಮ್ಮೆಲೆ ಲೂಯಿಪಾಶ್ಚರ್ ಎನ್ನುತ್ತಾರೆ. ಆದರೆ ಮೊದಲ ರೇಬಿಸ್ ಲಸಿಕೆ ಪಡೆದವರು ಯಾರು? ಅದಕ್ಕೆ ಉತ್ತರ ಇಲ್ಲಿದೆ.

ಜೋಸೆಫ್ ಮೈಸ್ಟರ್: ಜೋಸೆಫ್ ಮೈಸ್ಟರ್ ರೇಬೀಸ್ ವಿರುದ್ಧ ಲೂಯಿ ಪಾಶ್ಚರ್‌ನಿಂದ ವ್ಯಾಕ್ಸಿನೇಷನ್‌ಗೊಳಗಾದ ಮೊದಲನೆ ವ್ಯಕ್ತಿ. ಮೈಸ್ಟರ್‌ಗೆ ಒಂಬತ್ತು ವರ್ಷದವನಿದ್ದಾಗ ಒಂದು ಹುಚ್ಚುನಾಯಿ ಕಚ್ಚಿತು. ಪಾಶ್ಚರ್ ಒಂದು ದುರ್ಬಲಗೊಳಿಸಿದ ರೇಬೀಸ್ ವೈರಸ್‌ನಿಂದ ಅವನಿಗೆ ಚಿಕಿತ್ಸೆ ಮಾಡಿದ. ಚಿಕಿತ್ಸೆ ಯಶಸ್ವಿಯಾಗಿ ಮೈಸ್ಟರ್ ರೇಬೀಸ್‌ನಿಂದ ಬಾಧಿತನಾಗಲಿಲ್ಲ.

ಬೆಕ್ಟನ್, ಡಿಕಿನ್‌ಸನ್ ಆ್ಯಂಡ್ ಕಂಪನಿ: ಬಳಸಿ ಎಸೆಯಬಹುದಾದ ಸಿರಿಂಜ್‌ಗಳು ಮತ್ತು ಸೂಜಿಗಳನ್ನು ರಾಶಿ ರಾಶಿ ಉತ್ಪಾದಿಸಿದ ಕಂಪನಿ 1954ರಲ್ಲಿ ಬೆಕ್ಟನ್, ಡಿಕಿನ್‌ಸನ್ ಆ್ಯಂಡ್ ಕಂಪನಿ. ಸಿರಿಂಜ್‌ಗಳನ್ನು ಅಮೆರಿಕದಲ್ಲಿ ಸಾಲ್ಕ್ ಪೋಲಿಯೊ ಲಸಿಕೆಗಳನ್ನು ವಿಧಿವತ್ತಾಗಿ ಕೊಡಲು ಡಾ.ಜೋನಾಸ್‌ಸಾಲ್ಕ್‌ಗಾಗಿ ವೃದ್ಧಿಪಡಿಸಲಾಯಿತು.

ಬೆಂಜಮಿನ್ ಎ.ರುಬಿನ್: ಬೆಂಜಮಿನ್ ಎ.ರುಬಿನ್ ಒಬ್ಬ ಸೂಕ್ಷ್ಮ ಜೀವಿ ವಿಜ್ಞಾನಿಯಾಗಿದ್ದನು. ಇವನು 1965ರಲ್ಲಿ ವ್ಯಾಕ್ಸಿನೇಷನ್ ಸೂಜಿಯನ್ನು ಎರಡು ಶಾಖೆಗಳಾಗಿಸಿದನು. ರುಬಿನ್‌ನ ಸೂಜಿ ಲಸಿಕೆ ಹಾಕುವ ಪ್ರಕ್ರಿಯೆಯನ್ನು ತ್ವರಿತಗೊಳಿಸಿತು. ಅದು ಕೆಲವೇ ಚುಚ್ಚಿಕೆಗಳಲ್ಲಿ ಒಬ್ಬ ವ್ಯಕ್ತಿಗೆ ಲಸಿಕೆ ಹಾಕಲು ತಕ್ಕಷ್ಟು ಲಸಿಕೆ ಹಿಡಿದಿಡಬಲ್ಲುದು.

ಇಲ್ಲಿಗೆ ಲಸಿಕೆ ಕುರಿತ ಸಂಕ್ಷಿಪ್ತ ಮಾಹಿತಿ ಮುಗಿದಿದ್ದು, ಮುಂದಿನ ಕಂತಿನಲ್ಲಿ ಕಂಪ್ಯೂಟರ್ ಅಥವಾ ಗಣಕಯಂತ್ರ ಎಂದರೆ ಏನು, ಅದು ಹೇಗೆ ಕಾರ್ಯ ನಿರ್ವಹಿಸುತ್ತದೆ, ಅದರಲ್ಲಿ ಎಷ್ಟು ವಿಧ, ಅದರ ಆವಿಷ್ಕಾರ ಮಾಡಿದವರು ಯಾರು, ಹೇಗೆ ಅಭಿವೃದ್ಧಿಯಾಯಿತು, ಮಣಿಕಟ್ಟುವಿನ ಉಗಮ ಮತ್ತು ಬಳಕೆ ಇತ್ಯಾದಿ ವಿಷಯಗಳ ಬಗ್ಗೆ ಕಿರು ಮಾಹಿತಿ ನೀಡಲಾಗುವುದು.

ಮುಂದುವರಿಯುವುದು

ಸೈನ್ಸ್ ಕ್ವಿಜ್

1. ಇಪ್ಪತ್ತನೆಯ ಶತಮಾನದಲ್ಲಿ ವೈದ್ಯವಿಜ್ಞಾನಕ್ಕೆ ವರವಾಗಿ ದೊರೆತ ಜೀವಪ್ರತಿರೋಧಕ ಯಾವುದು?
ಎ) ಪೆನ್ಸಿಲಿನ್
ಬಿ) ನೊಟೀಟಂ
ಸಿ) ಪ್ರಿವೆಂಟಿವ್ ಮೆಡಿಸಿನ್
ಡಿ) ಪೋಲಿಯೋ ಲಸಿಕೆ

2. ವಿಜ್ಞಾನಿ ಅಲೆಕ್ಸಾಂಡರ್ ಫ್ಲೆಮಿಂಗ್ ಆಗಸ್ಟ್ 6, 1881ರಲ್ಲಿ ಯಾವ ದೇಶದಲ್ಲಿ ಜನಿಸಿದನು?
ಎ) ಅಮೆರಿಕ ಬಿ) ಜಪಾನ್
ಸಿ) ರಷ್ಯಾ ಡಿ) ಸ್ಕಾಟ್ಲೆಂಡ್

3. ಅಲೆಕ್ಸಾಂಡರ್ ಫ್ಲೆಮಿಂಗ್ ಯಾವ ಸಂಶೋಧನೆಗಾಗಿ 1908ರಲ್ಲಿ ಸೇಂಟ್ ಮೇರೀಸ್ ಆಸ್ಪತ್ರೆಯ ಪ್ರಯೋಗ ಶಾಲೆಗೆ ಸೇರಿಕೊಂಡನು?
ಎ) ಶಿಲೀಂಧ್ರಗಳ ಅಧ್ಯಯನಕ್ಕಾಗಿ
ಬಿ) ರೋಗಾಣು ಶಾಸ್ತ್ರ
ಸಿ) ಬೂಸ್ಟ್‌ಗಳ ಪ್ರಯೋಗ ಡಿ) ಪೆನ್ಸಿಲಿನ್

4. ಜೀವಪ್ರತಿರೋಧಕ ಪೆನ್ಸಿಲಿನ್ ಅನ್ನು ಯಾವ ಶಿಲೀಂಧ್ರದಿಂದ ತಯಾರಿಸಲಾಗಿದೆ?
ಎ) ಬೂಸ್ಟ್ ಬಿ) ಬ್ಯಾಕ್ಟೀರಿಯಾ
ಸಿ) ಫೆನ್ಸಿಲಿನಾ ಡಿ) ಪೆನ್ಸಿಲಿಯಂ ನೋಟೆಟಂ

5. ಮೊದಲನೆ ವಿಶ್ವಯುದ್ಧದ ಸಂದರ್ಭದಲ್ಲಿ ಸುರಕ್ಷಿತ ಪೂತಿನಾಶಕ ಪೆನ್ಸಿಲಿನ್ ಕಂಡುಹಿಡಿದು ಕೋಟ್ಯಂತರ ಜನರ ಪ್ರಾಣ ಉಳಿಸಿದ್ದಕ್ಕಾಗಿ ಅಲೆಕ್ಸಾಂಡರ್ ಫ್ಲೆಮಿಂಗ್‌ಗೆ ಯಾವ ವರ್ಷದಲ್ಲಿ ವೈದ್ಯಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ನೀಡಲಾಯಿತು?
ಎ) 1932 ಬಿ) 1937 ಸಿ) 1947 ಡಿ) 1953

ಉತ್ತರಗಳು: 1. ಎ, 2. ಡಿ, 3. ಬಿ, 4. ಡಿ, 5. ಸಿ

ಅಮೆರಿಕದ ರಾಜಕಾರಣಿ ಡೇವಿಡ್ ಡಿಂಗೆಲ್



ವ್ಯಕ್ತಿ ವಿಶೇಷ

ಅಮೆರಿಕದ ಇತಿಹಾಸದಲ್ಲೇ ಅತಿ ಹೆಚ್ಚು ಕಾಲ ಸಂಸತ್ ಪ್ರತಿನಿಧಿಯಾಗಿ ಸೇವೆ ಸಲ್ಲಿಸಿದ ಜಾನ್ ಡೇವಿಡ್ ಡಿಂಗೆಲ್(92) ನಿಧನ ಹೊಂದಿದ್ದಾರೆ. ಜಾನ್ ಅವರು ಡಿಸೆಂಬರ್ 13, 1955ರಲ್ಲಿ ಮೊದಲ ಬಾರಿಗೆ ಪ್ರತಿನಿಧಿಯಾಗಿ ಆಯ್ಕೆಯಾದರು, ನಂತರ 59 ವರ್ಷ(ಜನವರಿ 3, 2015) ಸಂಸತ್ ಪ್ರತಿನಿಧಿಯಾಗಿ(ಹೌಸ್ ಆಫ್ ರೆಪ್ರೆಸೆಂಟೇಟೀವ್)ಸೇವೆ ಸಲ್ಲಿಸಿದ್ದಾರೆ. ಅಮೆರಿಕದ 11 ಅಧ್ಯಕ್ಷರ ಜತೆ ಕೆಲಸ ಮಾಡಿರುವ ಡಿಂಗೆಲ್ 2015ರಲ್ಲಿ ರಾಜಕೀಯ ನಿವೃತ್ತಿ ಪಡೆದರು. ಮಿಚಿಗನ್‌ನ 12ನೇ ಕಾಂಗ್ರೆಷನಲ್ ಜಿಲ್ಲೆಯ ಪ್ರತಿನಿಧಿಯಾಗಿ ಜಾನ್ ಸೇವೆ ಸಲ್ಲಿಸಿದ್ದರು. ಹೌಸ್ ಎನರ್ಜಿ ಮತ್ತು ವಾಣಿಜ್ಯ ಸಮಿತಿಯ ದೀರ್ಘಕಾಲದ ಸದಸ್ಯರಾಗಿದ್ದರು. ಅಲ್ಲದೇ 1981ರಿಂದ 1995ರವರೆಗೆ ಮತ್ತು 2007 ರಿಂದ 2009ರವರೆಗೆ ಸಮಿತಿಯ ಅಧ್ಯಕ್ಷರಾಗಿದ್ದರು. ಡಿಂಗೆಲ್ ಸಂಸತ್ತಿಗೆ ಮೊದಲ ಬಾರಿಗೆ ಮಿಚಿಗನ್‌ನ 16ನೇ ಜಿಲ್ಲೆಯ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದರು. 2ನೇ ವಿಶ್ವ ಯುದ್ಧದಲ್ಲಿ ಹೋರಾಡಿದ ಯೋಧರಲ್ಲಿ ಸಂಸತ್ತಿನಲ್ಲಿ ಸೇವೆ ಸಲ್ಲಿಸುತ್ತಿದ್ದ ಪ್ರತಿನಿಧಿಗಳಲ್ಲಿ ಡಿಂಗೆಲ್ ಎರಡನೆಯವರಾಗಿದ್ದಾರೆ.

1950ರ ದಶಕ ಮತ್ತು ಡ್ವೈಟ್ ಡಿ.ಐಸೆನ್ಹೋವರ್ ಹಾಗೂ ಜಾನ್ ಎಫ್.ಕೆನಡಿ ಅಧ್ಯಕ್ಷತೆಯಲ್ಲಿ ಕೆಲಸ ಮಾಡಿದ ಸಂಸತ್ತಿನ ಕೊನೆಯ ಸದಸ್ಯರಾಗಿದ್ದರು. ಅಮೆರಿಕ ಮಾಜಿ ಅಧ್ಯಕ್ಷ ಬರಾಕ್ ಒಬಾಮ 2014ರಲ್ಲಿ ಇವರಿಗೆ ಪ್ರೆಸಿಡಂಟಲ್ ಮೆಡಲ್ ಆಫ್ ಫ್ರೀಡಂ ನೀಡಿ ಗೌರವಿಸಿದ್ದಾರೆ. ಇವರು 31ನೇ ಅವಧಿಗೆ ಸಂಸತ್ ಪ್ರತಿನಿಧಿ ಸ್ಥಾನಕ್ಕೆ ಸ್ಪರ್ಧಿಸುವುದಿಲ್ಲ ಎಂದು 2014ರ ಫೆಬ್ರವರಿ24 ರಂದು ಘೋಷಿಸಿದರು.

2100ಕ್ಕೆ ಬಣ್ಣ ಬದಲಿಸಲಿವೆ ಸಾಗರಗಳು..!

SCIENCE ಕಾರ್ನರ್

ಹವಾಮಾನ ಬದಲಾವಣೆಯಿಂದ 2100ಕ್ಕೆ ಸಾಗರಗಳ ಬಣ್ಣ ಬದಲಾಗಲಿದೆ ಎಂದು ಮೆಸಾಚ್ಯುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಐಟಿ) ಸಂಶೋಧನಾ ವರದಿ ಹೇಳಿದೆ. ಸಾಗರಗಳ ಬಣ್ಣ ಬದಲಾವಣೆ ನಾಟಕೀಯವಾಗಿದ್ದು, ಬರಿಗಣ್ಣಿನಿಂದ ಕಾಣಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದೆ. ಸೂರ್ಯನ ಬಹುತೇಕ ರಶ್ಮಿಯನ್ನು ಸಾಗರಗಳಲ್ಲಿ ಹಸಿರು ವಲಯಗಳನ್ನು ಸೃಷ್ಟಿಸಿರುವ ಫೈಥೋಪ್ಲಾಂಕ್ಟನ್ ಸಸ್ಯಗಳು ಹೀರಿಕೊಳ್ಳುತ್ತವೆ.ಇವು ಸಾಗರ ಜೀವಿಗಳ ಆಹಾರ ಸರಪಳಿಯ ಪ್ರಾಥಮಿಕ ಘಟಕಗಳಾಗಿದ್ದು, ಆಳವಿಲ್ಲದ ಸಾಗರ ಪ್ರದೇಶದಲ್ಲಿ ಗುಂಪುಗುಂಪಾಗಿ ಕಂಡುಬರುತ್ತವೆ. ಈ ಸಸ್ಯಗಳು ಸಾಗರಗಳಲ್ಲಿ ಹಸಿರು ವಲಯಗಳನ್ನು (ಸಾಗರಗಳ ಜೀವವೈವಿಧ್ಯ ತಾಣಗಳು) ಸೃಷ್ಟಿಸಿದ್ದು ಹಲವು ಬಗೆಯ ಸಾಗರ ಜೀವಿಗಳಿಗೆ ಆಶ್ರಯ ಒದಗಿಸುತ್ತಿವೆ. ಆದರೆ, ಹವಾಮಾನ ಬದಲಾವಣೆಯಿಂದ ಸಾಗರ ನೀರು ಬಿಸಿಏರುವಿಕೆ ಹೆಚ್ಚುತ್ತಿದ್ದು, ಫೈಕೋಪ್ಲಾಂಕ್ಟನ್‌ಗಳು ನಾಶವಾಗುತ್ತಿವೆ. 2100ಕ್ಕೆ ಸಾಗರಗಳಲ್ಲಿರುವ ಶೇ.50 ಹಸಿರು ವಲಯಗಳು ನಾಶವಾಗಲಿವೆ. ಇದರಿಂದ ಸಾಗರ ಜೀವಿಗಳಿಗೆ ಆಹಾರ ಕೊರತೆ ಉಂಟಾಗಿ ಜೀವವೈವಿಧ್ಯತೆ ನಶಿಸುತ್ತದೆ. ಹಸಿರು ವಲಯಗಳ ನಾಶದಿಂದ ಭೂ ಗ್ರಹ ಇಂದಿನ ಸೌಂದರ್ಯವನ್ನು ಕಳೆದುಕೊಳ್ಳಲಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಜಗತ್ತಿನಲ್ಲಿ ಉತ್ಪತ್ತಿಯಾಗುತ್ತಿರುವ ಬಹುತೇಕ ಕಾರ್ಬನ್ ಡೈ ಆಕ್ಸೈಡನ್ನು ಈ ಸಸ್ಯಗಳು ಹೀರಿಕೊಂಡು ಸಾಗರ ತಳಕ್ಕೆ ಸೇರಿಸುತ್ತಿವೆ. ಫೈಥೋಪ್ಲಾಂಕ್ಟನ್‌ಗಳ ನಾಶ ಮುಂದುವರಿದಲ್ಲಿ ವಾತಾವರಣದಲ್ಲಿ ಕಾರ್ಬನ್ ಡೈ ಆಕ್ಸೈಡ್ ಪ್ರಮಾಣ ಅಧಿಕವಾಗಲಿದೆ. ಇದರಿಂದ ಭೂ ತಾಪಮಾನ ಏರಿಕೆ ಮತ್ತಷ್ಟು ಬಿರುಸುಗೊಳ್ಳಲಿದೆ ಎಂದು ಎಂಐಟಿ ಸಂಶೋಧಕಿ ಸ್ಟೆಫಾನಿ ಡ್ಯುಟ್‌ಕೆವಿಸ್ ಹೇಳಿದ್ದಾರೆ.

ಸ್ಪರ್ಧಾ ಕಟ್ಟೆ

1. ನಗರಾಭಿವೃದ್ಧಿ ಮತ್ತು ವಸತಿ ಸಚಿವಾಲಯದಿಂದ ಪಿಎಂಎವೈ(ಯು) ಅವಾರ್ಡ್ಸ್ ಫಾರ್ ಇಂಪ್ಲಿಮೆಂಟೇಷನ್ ಆ್ಯಂಡ್ ಇನ್ನೋವೇಷನ್ ಪ್ರಶಸ್ತಿ ನೀಡಲು ನಿರ್ಧರಿಸಲಾಗಿದ್ದು, ಯಾವ ಕ್ಷೇತ್ರದ ಸಾಧನೆಗೆ ಈ ಪ್ರಶಸ್ತಿ ನೀಡಲಾಗುತ್ತದೆ.
1) ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳ ನಡುವೆ ಆರೋಗ್ಯಕರ ಸ್ಪರ್ಧೆ ಹುಟ್ಟುಹಾಕಲು
2) ಮಹಾನಗರ ಪಾಲಿಕೆಗಳ ಕಾರ್ಯಪರತೆ
3) ಹೌಸಿಂಗ್ ಫೈನಾನ್ಸ್ ಕಾರ್ಪೋರೇಷನ್‌ಗಳ ಕಾರ್ಯನಿರ್ವಹಣೆ
4) ಎಲ್ಲರಿಗೂ ಸೂರು ಪರಿಕಲ್ಪನೆಯನ್ನು ತಲುಪಲು ಸ್ಪರ್ಧಾತ್ಮಕತೆ ಮೂಡಿಸಲು
ಎ) ಎಲ್ಲವೂ ಸರಿ ಬಿ) ಎಲ್ಲವೂ ತಪ್ಪು
ಸಿ) 1, 4 ಮಾತ್ರ ಸರಿ ಡಿ) 2,3 ಮಾತ್ರ ಸರಿ

2. ಬರ್ಲಿನ್ ಅಂತಾರಾಷ್ಟ್ರೀಯ ಫಿಲಂ ಫೆಸ್ಟಿವಲ್ 2019ರಲ್ಲಿ ಇಂಡಿಯನ್ ಪೆವಿಲಿಯನ್ ಅನ್ನು ನಿರ್ದೇಶಕ ಮೆತ್ತಿಜಿಸ್ ವೋಟರ್ ಕ್ನೋಲ್ ಉದ್ಘಾಟಿಸಿದರು. ಈ ಚಿತ್ರೋತ್ಸವ ಎಷ್ಟು ದಿನಗಳ ಕಾಲ ನಡೆಯಲಿದೆ?
ಎ) ಫೆ. 7ರಿಂದ 17ವರೆಗೆ ಬಿ) ಫೆ. 10 ರಿಂದ 17 ವರೆಗೆ
ಸಿ) ಫೆ. 20ರಿಂದ 27ವರೆಗೆ ಡಿ) ಮಾ. 1 ರಿಂದ 10ವರೆಗೆ

ಉತ್ತರಗಳು: 1. ಎ, 2. ಎ

ಆ್ಯಕ್ಚುರಿಯಲ್ ಸೈನ್ಸ್ ಕೋರ್ಸ್

ಬ್ಯಾಂಕಿಂಗ್ ಮತ್ತು ಆರ್ಥಿಕ ಸೇವೆಗಳು: ಕೆಲವು ಲೇವಾದೇವಿ ಬ್ಯಾಂಕುಗಳು ಸಾಲ ನೀಡಿಕೆ ಪ್ರಕ್ರಿಯೆಯ ಅಪಾಯ ನಿರ್ವಹಿಸಲು ಆ್ಯಕ್ಚುವರಿಯಲ್ ಸೇವೆಗಳನ್ನು ವ್ಯಾಪಕವಾಗಿ ಬಳಸಿಕೊಳ್ಳುತ್ತವೆ. ಹಣಕಾಸು ಸಂಸ್ಥೆಗಳಲ್ಲಿ ಷೇರುಗಳಲ್ಲಿ ಮತ್ತು ಇತರ ನಿಧಿಗಳಲ್ಲಿ ಬಂಡವಾಳ ಹೂಡಿಕೆಯ ಲಾಭ, ನಷ್ಟ ಹಾಗೂ ಅಪಾಯಗಳನ್ನು ವಿಶ್ಲೇಷಿಸುವಲ್ಲಿ ಇವರು ಪ್ರಮುಖ ಪಾತ್ರ ವಹಿಸುತ್ತಾರೆ.

| ಶಿವಲೀಲಾ ಎಸ್. ಪೂಜಾರ್

ಆರೋಗ್ಯ ಮತ್ತು ವೈದ್ಯಕೀಯ ಕ್ಷೇತ್ರ: ಇತ್ತೀಚೆಗೆ ದೊಡ್ಡ ದೊಡ್ಡ ಆಸ್ಪತ್ರೆಗಳು, ಆರೋಗ್ಯ ರಕ್ಷಣೆ ಸೇವೆ ಒದಗಿಸುವ ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿ ಆ್ಯಕ್ಚುವರಿಗಳಿಗೆ ಉದ್ಯೋಗಾವಕಾಶಗಳನ್ನು ಒದಗಿಸುತ್ತಿವೆ. ಹಲವು ನ್ಯಾಯೋಚಿತ ಪಾಲಿಸಿಗಳ ಬದಲಾವಣೆಗಳಿಂದ ಆಗುವ ಅಪಾಯಗಳನ್ನು ಹಾಗೂ ವೈದ್ಯಕೀಯ ಮೌಲ್ಯಮಾಪನ ಕ್ರಮಗಳಲ್ಲಿ ಉಂಟಾಗುವ ಅಪಾಯಗಳನ್ನು ವಿಶ್ಲೇಷಿಸುವಲ್ಲಿ ಆ್ಯಕ್ಚುವರಿಗಳ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದೆ.

ಆ್ಯಕ್ಚುವರಿ ವೃತ್ತಿಪರರಾಗುವುದು ಹೇಗೆ?

- **ಮೊದಲ ಹಂತ: ಸ್ಟ್ರೀಮ್:** ಯಾವುದೇ ವಿಭಾಗದಲ್ಲಿ ಪಿಯುಸಿ ಪಾಸಾಗಿರಬೇಕು. **ಪದವಿ:** ಆ್ಯಕ್ಚುವರಿಯಲ್ ಕಾಮನ್ ಎಂಟ್ರೆನ್ಸ್ ಟೆಸ್ಟ್ (ಎಸಿಇಟಿ) ಆದ ಮೇಲೆ 1) ಸರ್ಟಿಫಿಕೇಟ್ ಇನ್ ಆ್ಯಕ್ಚುವರಿಯಲ್ ಟೆಕ್ನಿಕ್ (ಸಿಎಟಿ) 2) ಡಿಪ್ಲೊಮಾ ಇನ್ ಆ್ಯಕ್ಚುವರಿಯಲ್ ಟೆಕ್ನಿಕ್ (ಡಿಎಟಿ) 3) ಅಪ್ರೆಂಟಿಸ್‌ಷಿಪ್ 4) ಫೆಲೋಷಿಪ್ **ಪದವಿ ನಂತರ:** ಆಕ್ಚುವರಿ ವೃತ್ತಿಪರರಾಗಿ ಕಾರ್ಯನಿರ್ವಹಿಸಬಹುದು.
- **ಎರಡನೇ ಹಂತ: ಸ್ಟ್ರೀಮ್:** ಗಣಿತ ವಿಷಯದೊಂದಿಗೆ ಕಾಮರ್ಸ್/ ಸೈನ್ಸ್ **ಪದವಿ:** ಬಿಎಸ್ಸಿ ಆ್ಯಕ್ಚುವರಿಯಲ್ ಸೈನ್ಸಸ್ **ಪದವಿ ನಂತರ:** 1) ಎಂಎಸ್ಸಿ /ಎಂಬಿಎ ಆ್ಯಕ್ಚುವರಿಯಲ್ ಸೈನ್ಸಸ್ 2) 1 ವರ್ಷದ ಡಿಪ್ಲೊಮಾ / ಪಿಜಿ ಡಿಪ್ಲೊಮಾ ಪ್ರೋಗ್ರಾಮ್ -ಆ್ಯಕ್ಚುವರಿಯಲ್ ಸೈನ್ಸಸ್

ಮುಂದುವರಿಯುವುದು

ಇಂದು ಭಾರತ-ನ್ಯೂಜಿಲೆಂಡ್ ಫೈನಲ್ ಟಿ20

2ನೇ ಟಿ20 ಪಂದ್ಯದ ಮೂಲಕ ಗೆಲುವಿನ ಲಯಕ್ಕೆ ಮರಳಿದ ಟೀಮ್ ಇಂಡಿಯಾ, ನ್ಯೂಜಿಲೆಂಡ್ ನೆಲದಲ್ಲಿ ಚೊಚ್ಚಲ ಟಿ20 ಸರಣಿ ಗೆಲುವಿಗಾಗಿ ಭಾನುವಾರ 3ನೇ ಹಾಗೂ ಅಂತಿಮ ಪಂದ್ಯದಲ್ಲಿ ವೆಲ್ಲಿಂಗ್ಟನ್‌ನಲ್ಲಿ ಹೋರಾಡಲಿದೆ. ಈ ಮೂಲಕ ಆಸೀಸ್ ಪ್ರವಾಸದಂತೆ ಕಿವೀಸ್ ಪ್ರವಾಸವನ್ನು ಕ್ಲೀನ್‌ಸ್ವೀಪ್ ಮಾಡುವ ಗುರಿಯಲ್ಲಿದೆ. ನ್ಯೂಜಿಲೆಂಡ್ ಏಕದಿನ ಸರಣಿ ಸೋಲಿಗೆ ಸೇಡು ತೀರಿಸುವ ಹಂಬಲದಲ್ಲಿದೆ. ಆಕ್ಲಂಡ್‌ನಲ್ಲಿ ಎಲ್ಲ ಆಟಗಾರರಿಂದ ಸಂಘಟಿತ ನಿರ್ವಹಣೆ ಬಂದಿರುವುದರಿಂದ ಹಂಗಾಮಿ ನಾಯಕ ರೋಹಿತ್ ಶರ್ಮ ಅಂತಿಮ ಹನ್ನೊಂದರ ಬಳಗದಲ್ಲಿ ಬದಲಾವಣೆ ಮಾಡುವ ಸಾಧ್ಯತೆಯಿಲ್ಲ. ಜತೆಗೆ ಭಾರತಕ್ಕೆ ಟಿ20 ಇತಿಹಾಸದಲ್ಲಿ ಸತತ 11 ಸರಣಿಗಳಿಂದ ಅಜೇಯವಾಗಿ ಉಳಿದಿರುವ ಪಾಕಿಸ್ತಾನ ತಂಡದ ದಾಖಲೆಯನ್ನು ಸರಿಗಟ್ಟಲು ಒಳ್ಳೆಯ ಅವಕಾಶ. ದಿನದ ಇನ್ನೊಂದು ಪಂದ್ಯದಲ್ಲಿ ಈಗಾಗಲೆ ಸರಣಿಯನ್ನು 0-2ರಿಂದ ಸೋತಿರುವ ಹರ್ಮಾನ್‌ಪ್ರೀತ್ ಕೌರ್ ಸಾರಥ್ಯದ ಭಾರತ ಮಹಿಳಾ ತಂಡ ಹೋರಾಡಲಿದೆ. **ಪುರುಷರ ಪಂದ್ಯ:** ಮಧ್ಯಾಹ್ನ 12.30, **ಮಹಿಳಾ ಪಂದ್ಯ:** ಬೆಳಗ್ಗೆ 8.30, **ನೇರಪ್ರಸಾರ:** ಸ್ಟಾರ್‌ಸ್ಪೋರ್ಟ್ಸ್.

ಲೀ-ನಿಂಗ್ ಜತೆ ಪಿವಿ ಸಿಂಧು ₹50 ಕೋಟಿ ಡೀಲ್!

ಒಲಿಂಪಿಕ್ಸ್ ಮತ್ತು ವಿಶ್ವ ಚಾಂಪಿಯನ್‌ಷಿಪ್ ರಜತ ಪದಕ ವಿಜೇತೆ ಪಿವಿ ಸಿಂಧು ಚೀನಾದ ಕ್ರೀಡಾ ಸರಕು ಬ್ರಾಂಡ್ 'ಲೀ-ನಿಂಗ್' ಜತೆಗೆ ಮುಂದಿನ 4 ವರ್ಷಗಳಿಗೆ ಬರೋಬ್ಬರಿ 50 ಕೋಟಿ ರೂ. ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಭಾರತದ ಪುರುಷರ ಬ್ಯಾಡ್ಮಿಂಟನ್ ತಾರೆ ಕಿಡಂಬಿ ಶ್ರೀಕಾಂತ್ ಕಳೆದ ತಿಂಗಳು ಈ ಕಂಪನಿ ಜತೆ 35 ಕೋಟಿ ರೂ.ಗಳ ಪ್ರಾಯೋಜಕತ್ವ ಒಪ್ಪಂದ ಮಾಡಿಕೊಂಡಿದ್ದರೆ, 23 ವರ್ಷದ ಸಿಂಧು ಹೊಸ ದಾಖಲೆ ನಿರ್ಮಿಸಿದ್ದಾರೆ. ಇದು ಬ್ಯಾಡ್ಮಿಂಟನ್ ಜಗತ್ತಿನ ಅತಿದೊಡ್ಡ ಒಪ್ಪಂದವಾಗಿದೆ. ಟೀಮ್ ಇಂಡಿಯಾ ನಾಯಕ ವಿರಾಟ್ ಕೊಹ್ಲಿ 'ಪೂಮಾ' ಜತೆ ಮಾಡಿಕೊಂಡಿರುವ ಬೃಹತ್ ಒಪ್ಪಂದಕ್ಕೆ ಸಿಂಧು ಡೀಲ್ ಸನಿಹದ ಮೊತ್ತವನ್ನು ಹೊಂದಿದೆ. ಕೊಹ್ಲಿ 2017ರಲ್ಲಿ ಪೂಮಾ ಜತೆ 8 ವರ್ಷಗಳಿಗೆ 100 ಕೋಟಿ ರೂ. ಒಪ್ಪಂದ ಮಾಡಿಕೊಂಡಿದ್ದರು.

ಗುನ್ನ

ಜ್ಞಾನಾರ್ಜನೆಗಾಗಿ ಇಲ್ಲೊಂದಿಷ್ಟು ಪ್ರಶ್ನೋತ್ತರಗಳು...

1. ಇದುವರೆಗೆ ಎಷ್ಟು ಏಕದಿನ ವಿಶ್ವಕಪ್ ಟೂರ್ನಿ ನಡೆದಿವೆ?
2. ಚೊಚ್ಚಲ ಏಕದಿನ ವಿಶ್ವಕಪ್ ಟೂರ್ನಿ ಎಲ್ಲಿ ನಡೆಯಿತು?
3. ಅತ್ಯಧಿಕ (4) ಬಾರಿ ಏಕದಿನ ವಿಶ್ವಕಪ್ ಟೂರ್ನಿಯ ಆತಿಥ್ಯ ವಹಿಸಿರುವ ದೇಶ ಯಾವುದು?

ಇಂದಿನ ಉತ್ತರ
1.11, 2.ಇಂಗ್ಲೆಂಡ್, 3. ಇಂಗ್ಲೆಂಡ್

Editor: CHANNEGOWDA K.N. Published by CHANNEGOWDA K.N. on behalf of VRL Media Limited, 2nd Floor, VRL Complex, CTS No. 122/78A, New Cotton Market, Hubballi - 580029 and printed by him at VRL Media Limited, Varur, Hubballi - 581207. email: newshbl@vijayavani.in, Ph: 0836-2250932 / 935. Fax: 0836-2250866. All rights reserved. Reproduction in whole or in part without written permission is prohibited. RNI NO: KARKAN/2012/44060, Volume: 7, Issue: 313. Resident Editor: Mohan Hegde

Scanned by CamScanner